# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಡಿಸೆಂಬರ್ 20, 2021

ಸಂಪುಟ : 48 ಸಂಚಿಕೆ : 219 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಾಗೃತಿ ಬೈಕ್ ರ್‍ಯಾಲಿ

### ಜಿಲ್ಲಾ ಪಂಚಾಯ್ತಿಯಿಂದ ಸೂಳೆಕೆರೆವರೆಗೆ ಅಧಿಕಾರಿಗಳಿಂದ ಜಾಗೃತಿ ಯಾತ್ರೆ



ದಾವಣಗೆರೆ, ಡಿ. 19 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳಲ್ಲಿ ಸಾರ್ವಜನಿಕರಿಗೆ ದೊರೆಯುವ ಸೌಲಭ್ಯಗಳು, ಅಲ್ಲದೆ ಸಾಮಾಜಿಕ ಪಿಡುಗುಗಳ ಕುರಿತು ಜನ ಜಾಗೃತಿ, ಸಂಚಾರ ನಿಯಮಗಳು ಹಾಗೂ ಕೋವಿಡ್ ನಿಯಂತ್ರಣ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್, ಎಸ್‌ಪಿ ರಿಷ್ಯಂತ್ ಸಿ.ಬಿ. ಅವರ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡ ದಾವಣಗೆರೆಯಿಂದ, ಸಂತೆಬೆನ್ನೂರು ಮಾರ್ಗವಾಗಿ, ಸೂಳೆಕೆರೆ ವರೆಗೆ ಬೈಕ್ ರ್‍ಯಾಲಿ ನಡೆಸಿದೆ.

ಜಿಲ್ಲಾ ಪಂಚಾಯತ್ ಆವರಣದಲ್ಲಿ ಭಾನುವಾರ ಬೆಳಿಗ್ಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ನೇತೃತ್ವದ ಅಧಿಕಾರಿಗಳ ತಂಡ ರ್‍ಯಾಲಿ ನಡೆಸಿದೆ.

ಜಿಲ್ಲಾಧಿಕಾರಿಗಳು ತಮ್ಮ ಬೈಕ್‌ಗೆ 'ಕೋವಿಡ್ ನಿಯಂತ್ರಣ ಕುರಿತು, ತಪ್ಪದೇ ಲಸಿಕೆ ಪಡೆಯುವಂತೆ ಕೋರುವ ಸಂದೇಶವುಳ್ಳ ಫಲಕವನ್ನು ಅಳವಡಿಸಿಕೊಂಡರೆ, ಎಸ್‌ಪಿ ಸಿ.ಬಿ. ರಿಷ್ಯಂತ್ ಅವರು ಅಪರಾಧ ತಡೆ ಮಾಸಾಚರಣೆ ನಿಮಿತ್ತ, 'ಹೆಲ್ಮೆಟ್ ಬಳಸಿ ಚಾಲನೆ ಮಾಡಿ', ಅಪರಾಧ ಮುಕ್ತ ಸಮಾಜ ನಿರ್ಮಿಸೋಣ ಬನ್ನಿ' ಎಂಬ ಸಂದೇಶವುಳ್ಳ ಫಲಕ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯ ಕುಮಾರ್ ಅವರು 'ಮಕ್ಕಳ ಸಹಾಯವಾಣಿ 1098' ಕುರಿತು, ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್ ಅವರು, ಬಾಲ ಕಾರ್ಮಿಕ ಪದ್ದತಿ ವಿರೋಧದ ಬಗೆಗಿನ ಸಂದೇಶವುಳ್ಳ ಫಲಕ, ಆರ್‌ಟಿಒ ಶ್ರೀಧರ್ ಮಲ್ನಾಡ್ ಅವರು ಕೂಡ ರಸ್ತೆ ಸುರಕ್ಷತೆ ಸಪ್ತಾಹ ಕುರಿತು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಗಂಗಪ್ಪ ಅವರು ಕೋವಿಡ್ ನಿಯಂತ್ರಣ ಕುರಿತ ಜಾಗೃತಿ ಫಲಕಗಳನ್ನು ತಮ್ಮ ಬೈಕ್‌ಗೆ ಅಳವಡಿಸಿಕೊಂಡಿದ್ದರು.

ಜಿಲ್ಲಾ ಪಂಚಾಯತ್ ಆವರಣದಿಂದ ಹೊರಟ ಅಧಿಕಾರಿಗಳ ಬೈಕ್ ರ್‍ಯಾಲಿ ಸಂತೇಬೆನ್ನೂರಿನ ಐತಿಹಾಸಿಕ ಪುಷ್ಕರಣಿಗೆ ಭೇಟಿ ನೀಡಿತು. ನಂತರ ಸೂಳೆಕೆರೆ ಬಳಿಯ ಐತಿಹಾಸಿಕ ಸಿದ್ದೇಶ್ವರ ದೇವಸ್ಥಾನಕ್ಕೆ ತೆರಳಿ, ದೇವರ ದರ್ಶನ ಮಾಡುವ ಮೂಲಕ ಜಾಥಾ ಪೂರ್ಣಗೊಳಿಸಲಾಯಿತು.

ಅಪರ ಜಿಲ್ಲಾಧಿಕಾರಿ ಸದಾಶಿವ ಪ್ರಭು, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಆನಂದ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುನಾಥ ನಾಯಕ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

## ವಕೀಲರು ಸಾಮಾಜಿಕ ವೈದ್ಯರು

### ಹೈಕೋರ್ಟ್ ನ್ಯಾಯಮೂರ್ತಿ ಬಿ. ಎಂ.ಶ್ಯಾಮ್ ಪ್ರಸಾದ್ ಅಭಿಮತ

ದಾವಣಗೆರೆ, ಡಿ. 19 – ವಕೀಲರು ಸಾಮಾಜಿಕ ಸಮಸ್ಯೆಗಳು ಹಾಗೂ ಸಮಾಜದಲ್ಲಿ ಹಕ್ಕುಗಳಿಗೆ ಚ್ಯುತಿಯಾದಾಗ ನೆರವು ನೀಡುತ್ತಾರೆ. ಸ್ವತಂತ್ರ ಚಿಂತನೆ ಮೂಲಕ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ಹೀಗಾಗಿ ವಕೀಲರು 'ಸಾಮಾಜಿಕ ವೈದ್ಯರು' ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಬಿ. ಎಂ. ಶ್ಯಾಮ್‌ಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಅಖಿಲ ಭಾರತ ಅಧಿವಕ್ತಾ ಪರಿಷತ್ ವತಿಯಿಂದ ನಗರದ ರೋಟರಿ ಬಾಲಭವನ ದಲ್ಲಿ ಸಂವಿಧಾನ ಹಾಗೂ ವಕೀಲರ ದಿನಾಚರಣೆ ಪ್ರಯುಕ್ತ ಇಂದು ಆಯೋಜಿಸಲಾಗಿದ್ದ ಕಾನೂನು ಕಾರ್ಯಾಗಾರದಲ್ಲಿ ಅವರು ವಿಶೇಷ ಉಪನ್ಯಾಸ ನೀಡುತ್ತಿದ್ದರು.

ವಕೀಲರು ಸ್ವತಂತ್ರವಾಗಿ ಚಿಂತಿಸುವ ಸಾಮರ್ಥ್ಯ ಹೊಂದಿರುವುದು ಹಾಗೂ ಸಮಾಜದ ಜೊತೆ ಸಂವಾದ ನಡೆಸುವುದು ವಕೀಲಿ ವೃತ್ತಿಯ ಸೊಗಡಾಗಿದೆ ಎಂದವರು ಹೇಳಿದರು.

ವಕೀಲರು ಕೇವಲ ಕಾನೂನು ಅಷ್ಟೇ ಅಲ್ಲದೇ ಸಮಾಜ ವಿಜ್ಞಾನ, ಆರ್ಥಿಕತೆ, ವಿಜ್ಞಾನ ಸೇರಿದಂತೆ ಹಲವಾರು ವಿಷಯಗಳನ್ನು ಅರಿಯುವ ಅಗತ್ಯವಿದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ, ವಕೀಲರು ತಿಳಿಯದೇ ಇರುವ ವಿಷಯ ಇಲ್ಲ ಎಂಬಂತಿರಬೇಕು ಎಂದವರು ಕಿವಿಮಾತು ಹೇಳಿದರು.



> ಜಿಲ್ಲೆಯ ನ್ಯಾಯಾಲಯಗಳಲ್ಲಿ 36 ಸಾವಿರದಷ್ಟು ಪ್ರಕರಣಗಳು ಬಾಕಿ ಇವೆ. ಪ್ರತಿಯೊಂದು ಕೋರ್ಟ್ ಎದುರು ಸಾವಿರದಷ್ಟು ಪ್ರಕರಣಗಳಿವೆ. ಇವುಗಳನ್ನು ತ್ವರಿತವಾಗಿ ಬಗೆಹರಿಸಲು ವಕೀಲರ ಸಹಾಯ ಅತ್ಯಗತ್ಯ. ವಕೀಲರು ಹೆಚ್ಚು ಅಧ್ಯಯನಶೀಲ ಹಾಗೂ ಶ್ರಮ ವಹಿಸಿದಾಗ ಪ್ರಕರಣಗಳನ್ನು ಬಗೆಹರಿಸಲು ನ್ಯಾಯಮೂರ್ತಿಗಳಿಗೆ ನೆರವಾಗುತ್ತದೆ.
>
> - ಬಿ.ಎಂ. ಶ್ಯಾಮ್ ಪ್ರಸಾದ್, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ

ಹೆಸರಾಂತ ವಕೀಲರೂ ಆಗಿದ್ದ ದೇಶದ ಪ್ರಥಮ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರ ಜನ್ಮದಿನವನ್ನು ವಕೀಲರ ದಿನವಾಗಿ ಡಿ.3ರಂದು ಆಚರಿಸಲಾಗುತ್ತದೆ. ಪ್ರಸಾದ್ ಅವರ ಶಿಸ್ತು, ಪ್ರಾಮಾಣಿಕತೆ, ಸಮಾಜ ಸೇವೆ ಹಾಗೂ ದೇಶದ ಸಂಸ್ಕೃತಿಯ ಅಧ್ಯಯನಗಳು ವಕೀಲರಿಗೆ ಆದರ್ಶವಾಗಬೇಕು ಎಂದು (2ನೇ ಪುಟಕ್ಕೆ)

## ಪಿ.ಬಿ. ರಸ್ತೆಯಿಂದ ಎವಿಕೆ ರಸ್ತೆ ಸಂಪರ್ಕ ವ್ಯವಸ್ಥೆ ಮಾರ್ಪಾಡು

ದಾವಣಗೆರೆ, ಡಿ.19- ರೇಣುಕಾ ಮಂದಿರದ ಬಳಿ ಅಪಘಾತವಾಗಿ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿದ್ದ ಬಳಿಕ ಪೊಲೀಸರು ಎಚ್ಚೆತ್ತಿದ್ದು, ಎವಿಕೆ ಕಾಲೇಜು ರಸ್ತೆ ಸಂಪರ್ಕಿಸುವ ರಸ್ತೆಯನ್ನು ಬಂದ್ ಮಾಡಿದ್ದಾರೆ.

ವಸಂತ ಟಾಕೀಸ್ ರಸ್ತೆಯಿಂದ ಪಿಬಿ ರಸ್ತೆ ಮೂಲಕ ಹಳೇ ಪಿಬಿ ರಸ್ತೆ ಮಧ್ಯ ಹಾದು ಎವಿಕೆ ರಸ್ತೆಗೆ ಹೋಗಬೇಕು. ಅಲ್ಲದೇ, ಪಿಬಿ ರಸ್ತೆ ಮುಖ್ಯ ರಸ್ತೆಯಾಗಿರುವುದರಿಂದ ಎರಡೂ ಕಡೆಯಿಂದ ವಾಹನಗಳ ಓಡಾಟ ಹೆಚ್ಚಿರುತ್ತದೆ. ಅಲ್ಲದೇ, ಈ ವೃತ್ತದಲ್ಲಿ ಸಿಗ್ನಲ್ ಕೂಡ ಇಲ್ಲ. ಎರಡೂ ಕಡೆಯಲ್ಲಿ ತಿರುವು ಇರುವುದರಿಂದ ವಾಹನಗಳು ಎಗ್ಗಿಲ್ಲದೇ ನುಗ್ಗುತ್ತವೆ. ಈ ವೃತ್ತದಲ್ಲಿ ವಾಹನಗಳ ಅವೈಜ್ಞಾನಿಕ ವಾಹನ ಸಂಚಾರ ತಡೆಯುವ ಉದ್ದೇಶದಿಂದ ಈ ಸ್ಥಳದಲ್ಲಿ ಬ್ಯಾರಿಕೇಡ್ ಗಳನ್ನು ಹಾಕಿ ಬಂದ್ ಮಾಡಲಾಗಿದೆ.

ಎವಿಕೆ ಕಾಲೇಜು ರಸ್ತೆ ಕಡೆಗೆ ತೆರಳುವ ವಾಹನ ಸವಾರರು ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಸಾಗಿ ಅಲ್ಲಿಂದ ತಿರುಗಿ ಬಂದು ಎವಿಕೆ (2ನೇ ಪುಟಕ್ಕೆ)

## ಶೀಘ್ರದಲ್ಲೇ ಸಹಕಾರಿ ವಿವಿ

ಪುಣೆ, ಡಿ. 19- ಕೇಂದ್ರ ಸರ್ಕಾರ ಶೀಘ್ರದಲ್ಲೇ ಸಹಕಾರಿ ನಿರ್ವಹಣಾ ಕೋರ್ಸ್‌ಗಳಿಗಾಗಿ ರಾಷ್ಟ್ರೀಯ ವಿಶ್ವವಿದ್ಯಾನಿಲಯ ಸ್ಥಾಪಿಸಲಿದೆ ಎಂದು ಕೇಂದ್ರ ಗೃಹ ಹಾಗೂ ಸಹಕಾರಿ ಸಚಿವ ಅಮಿತ್ ಷಾ ತಿಳಿಸಿದ್ದಾರೆ.

ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಅವರು, ಸರ್ಕಾರ ಹೊಸ ಸಹಕಾರಿ ನೀತಿಯನ್ನು ಶೀಘ್ರದಲ್ಲೇ ಪ್ರಕಟಿಸಲಿದೆ ಎಂದು ತಿಳಿಸಿದ್ದಾರೆ.

ಸಹಕಾರಿ ವಲಯದಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳಿವೆ. ಸಹಕಾರಿ ಸಂಸ್ಥೆಗಳ ಕುರಿತ ಪದವಿಗಳಿಂದ ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದವರು ಹೇಳಿದ್ದಾರೆ.

ಶೀಘ್ರದಲ್ಲೇ ಸರ್ಕಾರ ಸಹಕಾರಿ ನಿರ್ವಹಣೆಗಾಗಿ ವಿಶ್ವವಿದ್ಯಾನಿಲಯ ಸ್ಥಾಪಿಸಲಿದೆ. ಇದು ರಾಷ್ಟ್ರೀಯ ವಿಶ್ವವಿದ್ಯಾನಿಲಯವಾಗಲಿದೆ. ಹಲವಾರು ಕಾಲೇಜುಗಳು ಈ ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಗಾಗಲಿವೆ ಎಂದು ಅಮಿತ್ ಷಾ ಹೇಳಿದ್ದಾರೆ.

## ಉತ್ಪಾದನಾ ವೆಚ್ಚಕ್ಕನುಗುಣವಾಗಿ ಏರಿಕೆಯಾಗದ ಪತ್ರಿಕೆಗಳ ದರ

### ವಿತರಕರಿಗೆ ಹೆಚ್ಚಾಗದ ಕಮೀಷನ್ : ಎಂ.ಎಸ್. ವಿಕಾಸ್



**'ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ' ಉದ್ಘಾಟನೆ**

ದಾವಣಗೆರೆ, ಡಿ.19- ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಪತ್ರಿಕೆಗಳ ದರ ಏರಿಕೆಯಾಗದ ಕಾರಣ ಪತ್ರಿಕಾ ವಿತರಕರು ಹಾಗೂ ಮಾರಾಟಗಾರರಿಗೆ ಹೆಚ್ಚು ಕಮಿಷನ್ ಸಿಗದಂತಾಗಿದೆ ಎಂದು 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಹೇಳಿದರು.

ಭಾನುವಾರ ನಗರದ ರೋಟರಿ ಬಾಲಭವನದಲ್ಲಿ 'ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ' ಉದ್ಘಾಟಿಸಿ ಅವರು ಮಾತನಾಡಿದರು.

ಕಮೀಷನ್ ಕಡಿಮೆ ಎಂಬ ಕಾರಣಕ್ಕೆ ಪತ್ರಿಕೆ ಹಂಚುವ ಕೆಲಸ ಆಕರ್ಷಣೆ ಕಳೆದುಕೊಂಡಿದೆ. ರಾಜ್ಯ ಮಟ್ಟದ ಪತ್ರಿಕೆಗಳು ಮುಖ ಬೆಲೆ ಹೆಚ್ಚಿಸಿ ಅದಕ್ಕನುಗುಣವಾಗಿ ಕಮಿಷನ್ ನೀಡಿದಾಗ ವಿತರಕರ ಬದುಕಿನಲ್ಲೂ ಬದಲಾವಣೆ ಕಾಣಲು ಸಾಧ್ಯ ಎಂದು ಹೇಳಿದರು.

ಮಾರುಕಟ್ಟೆಗೆ ಅನುಗುಣವಾಗಿ ಎಲ್ಲಾ ಕ್ಷೇತ್ರಗಳೂ ದರ ಏರಿಕೆ ಕಂಡಿವೆ. ಆದರೆ ಪತ್ರಿಕೆಗಳ ದರ ಮಾತ್ರ ನಾಲ್ಕರಿಂದ ಐದು ರೂಪಾಯಿಗಳಿಗೆ ಸೀಮಿತವಾಗಿದೆ. ಪತ್ರಿಕಾ ವಿತರಕರ ಕಳೆದ ಎರಡೂ ವರೆ ದಶಕಗಳ ಪರಿಸ್ಥಿತಿಯೇ ಇಂದಿಗೂ ಇದೆ ಎಂದರು.

ಪತ್ರಿಕಾ ವಿತರಕರ ಅಭಿವೃದ್ಧಿಗಾಗಿ ಸಂಘ ಪ್ರಾರಂಭಿಸಿದ್ದು, ಆ ಮುಖೇನ ಒಗ್ಗಟ್ಟಾಗಿ ಮುನ್ನಡೆದರೆ ಸಂಘದ ಜೊತೆ ನಿಮ್ಮ ಬೆಳವಣಿಗೆಯನ್ನೂ ಕಾಣಬಹುದೆಂದು ಸಲಹೆ ನೀಡಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ ಮಾತನಾಡಿ, ಮಹಾನಗರ ಪಾಲಿಕೆಯಲ್ಲಿರುವ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಯ ಸೌಲಭ್ಯ ಕೇವಲ ಪತ್ರಕರ್ತರಿಗಷ್ಟೇ ಅಲ್ಲದೆ ಪತ್ರಿಕಾ ವಿತರಕರಿಗೂ ಸಿಗಲಿದೆ. ಯಾವುದೇ ಕಾರಣಕ್ಕೂ ಪತ್ರಿಕಾ ರಂಗದ ಸೌಲಭ್ಯಗಳನ್ನು ದುರ್ಬಳಕೆ ಮಾಡಿಕೊಳ್ಳಬಾರದು ಎಂದರು.

ಹಿರಿಯ ಪತ್ರಕರ್ತ ಮಂಜುನಾಥ ಗೌರಕ್ಕಳವರ್ ಮಾತನಾಡಿ, ಪತ್ರಿಕಾ ವಿತರಕರು ಪ್ರತಿನಿತ್ಯ ಗಾಳಿ, ಮಳೆ ಎನ್ನದೇ ತಮ್ಮ ಕಾಯಕವನ್ನು ಶ್ರದ್ಧೆಯಿಂದ ನಡೆಸುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಸೌಲಭ್ಯಗಳು ದೊರಕಬೇಕಿದೆ. ಪತ್ರಿಕಾ ವಿತರಕರಿಗೆ ಒಂದೆಡೆ ಶೆಡ್ ಕೊಡುವಂತಹ ಕೆಲಸ ಆಗಬೇಕು ಎಂದರು. (2ನೇ ಪುಟಕ್ಕೆ)

## ಮತದಾರರ ಪಟ್ಟಿಯಲ್ಲಿ ಹೆಸರು ದುಪ್ಪಟ್ಟು ತಡೆಗೆ ಆಧಾರ್ ಲಿಂಕ್

**ಲೋಕಸಭೆಯಲ್ಲಿ ಸೋಮವಾರ ಮಸೂದೆ ಮಂಡನೆ**

ನವದೆಹಲಿ, ಡಿ.19- ಮತದಾರರ ಪಟ್ಟಿಯನ್ನು ಆಧಾರ್ ಜೊತೆ ಜೋಡಿಸುವ ಮೂಲಕ ಮತದಾರರ ಪಟ್ಟಿಯಲ್ಲಿ ಹೆಸರು ದುಪ್ಪಟ್ಟಾಗುವುದನ್ನು ತಪ್ಪಿಸುವ ಉದ್ದೇಶದ ಮಸೂದೆಯನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಲಾಗುವುದು.

ಚುನಾವಣಾ ಕಾನೂನುಗಳ (ತಿದ್ದುಪಡಿ) ಮಸೂದೆ, 2021 ರ ಮೂಲಕ ಮತದಾರರ ನೋಂದಣಿ ಅಧಿಕಾರಿಗಳಿಗೆ ಜನರ ಆಧಾರ್ ಸಂಖ್ಯೆ ಪಡೆಯುವ ಅಧಿಕಾರ ನೀಡಲಾಗುವುದು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ಬಯಸುವವರಿಂದ ಆಧಾರ್ ಕಾರ್ಡ್ ಪಡೆಯುವ ಮೂಲಕ ಹೆಸರು ಒಂದಕ್ಕೂ ಹೆಚ್ಚು ಕಡೆ ನೋಂದಣಿಯಾಗುವುದನ್ನು ತಪ್ಪಿಸಲಾಗುವುದು. ಆದರೆ, ಆಧಾರ್ ಕಾರ್ಡ್ ನೀಡದ ಕಾರಣಕ್ಕಾಗಿ ಯಾರ ಹೆಸರನ್ನೂ ಮತದಾರರ ಪಟ್ಟಿಗೆ ಸೇರಿಸಲು ನಿರಾಕರಿಸಬಾರದು ಎಂದು ಮಸೂದೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಆಧಾರ್ ಕಾರ್ಡ್ ಬದಲು ಜನರು ಬೇರೆ ನಿಗದಿತ ಗುರುತಿನ ಚೀಟಿನೀಡಲು ಅವಕಾಶವಿದೆ.

ಮತ್ತೊಂದು ತಿದ್ದುಪಡಿಯ ಮೂಲಕ ವರ್ಷದಲ್ಲಿ ನಾಲ್ಕು ಬಾರಿ ಮತದಾರರು ಅರ್ಹತಾ ದಿನಾಂಕಗಳನ್ನು ಹೊಂದಲು ಅವಕಾಶ ನೀಡಲಾಗುವುದು. ಪ್ರಸಕ್ತ ಜನವರಿ 1ರಂದು ಇರುವ (2ನೇ ಪುಟಕ್ಕೆ)

## ಮೋದೀಜಿ ನಿಮ್ಮ ಸಮಯ ಮುಗಿಯಿತು



ರಾಣೇಬೆನ್ನೂರು, ಡಿ.19- ಹಾವೇರಿ ಜಿಲ್ಲೆಯ ಹಾನಗಲ್ಲ ಉಪಚುನಾವಣೆಯಲ್ಲಿ ವಿಧಾನಸಭೆಗೆ ಶ್ರೀನಿವಾಸ ಮಾನೆ ಹಾಗೂ ಅವಿಭಜಿತ ಧಾರವಾಡ ಜಿಲ್ಲೆಯಿಂದ ಮೇಲ್ಮನೆಗೆ ನನ್ನನ್ನು ಆಯ್ಕೆ ಮಾಡಿರುವ ಮತದಾರರು 'ನರೇಂದ್ರ ಮೋದಿಯವರೇ ನಿಮ್ಮ ಸಮಯ ಮುಗಿಯಿತು' ಎಂದು ತೀರ್ಪು ನೀಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಹೇಳಿದರು.

ಇಲ್ಲಿನ ಕಾಂಗ್ರೆಸ್ ಕಛೇರಿಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮೋದಿಯವರ ಸುಳ್ಳು ಮಾತುಗಳು, ಜನವಿರೋಧಿ ಆಡಳಿತ, ಶೇ.40ರ ಕಮೀಷನ್ ಹಾಗೂ ಏರುತ್ತಿರುವ ದರಗಳನ್ನು ನೋಡಿ ಜನರು ಅಸಮಾಧಾನಗೊಂಡಿದ್ದಾರೆ. ಈ ಭಾಗದ ಜನ ನೀಡಿದ ತೀರ್ಪನ್ನು ರಾಜ್ಯ ಹಾಗೂ ದೇಶದ ಜನರು ಎಲ್ಲಾ (2ನೇ ಪುಟಕ್ಕೆ)

## ಸಿಖ್ ಗುರುದ್ವಾರದಲ್ಲಿ ವ್ಯಕ್ತಿಯ ಹತ್ಯೆ

**ಧಾರ್ಮಿಕ ಅಪಚಾರದ ಆರೋಪದ ಮೇಲೆ ಎರಡು ದಿನದಲ್ಲಿ ಎರಡನೇ ಹತ್ಯೆ**

ಕಪುರ್ತಲ (ಪಂಜಾಬ್), ಡಿ. 19 – ಸ್ವರ್ಣ ದೇಗುಲದಲ್ಲಿ ವ್ಯಕ್ತಿಯೊಬ್ಬರನ್ನು ಹತ್ಯೆಗೈದ ಮರು ದಿನವೇ, ನಿಜಾಂಪುರ ಗ್ರಾಮದಲ್ಲಿರನ ಗುರುದ್ವಾರದಲ್ಲಿ ಗುಂಪು ಇನ್ನೋರ್ವ ವ್ಯಕ್ತಿಯನ್ನು ಬಡಿದು ಹತ್ಯೆ ಮಾಡಿದೆ.

ವ್ಯಕ್ತಿಯನ್ನು ರಕ್ಷಿಸಲು ಯತ್ನಿಸಿದ ಪೊಲೀಸರ ಮೇಲೆ ಗ್ರಾಮಸ್ಥರು ಹಾಗೂ ಸಿಖ್ ಸಂಘಟನೆಗಳ ಸದಸ್ಯರು ಹಲ್ಲೆ ನಡೆಸಿದ್ದು, ಮೂವರು ಪೊಲೀಸರು ಗಾಯಗೊಂಡಿದ್ದಾರೆ.

ಕಪುರ್ತಲ – ಸುಭ್ನಪುರ ರಸ್ತೆಯಲ್ಲಿರುವ ಗುರುದ್ವಾರದಲ್ಲಿ ಅಪಚಾರ ಎಸಗಿದ ಕಾರಣ ಹತ್ಯೆ ಮಾಡಲಾಗಿದೆ ಎಂದು ಗ್ರಾಮಸ್ಥರು ಹೇಳಿದ್ದಾರೆ. ಆದರೆ, ಗುರುದ್ವಾರಕ್ಕೆ ಭೇಟಿ ನೀಡಿದಾಗ ಅಪಚಾರ ಎಸಗಿದ ಯಾವುದೇ ಸಾಕ್ಷಿ ಕಂಡು ಬಂದಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ವಲಸೆ ಕಾರ್ಮಿಕ ವ್ಯಕ್ತಿಯೋರ್ವ ಧಾರ್ಮಿಕ ಧ್ವಜವಾದ ನಿಶಾನ್ ಸಾಹಿಬ್‌ಗೆ ಅಪಚಾರ ಎಸಗಲು ಯತ್ನಿಸಿದ್ದ. ವ್ಯಕ್ತಿ ಓಡಿ ಹೋದ ಆದರೆ, ಗುರುದ್ವಾರದ ಕೆಲಸಗಾರರು ಬೆನ್ನಟ್ಟಿ ಹಿಡಿದಿದ್ದಾರೆ ಎಂದು ಗುರುದ್ವಾರರ ವ್ಯವಸ್ಥಾಪಕ ಅಮರ್‌ಜಿತ್ ಸಿಂಗ್ ಹೇಳಿದ್ದಾರೆ.

ಆದರೆ, ಗುರುತು ಪತ್ತೆಯಾಗದ ವ್ಯಕ್ತಿ ಗುರುದ್ವಾರ ಸಂಕೀರ್ಣದಲ್ಲಿರುವ ನೆಲಮಹಡಿಯ ಅಡುಗೆ ಮನೆಯಲ್ಲಿ ನೆಲದ ಮೇಲೆ ಕುಳಿತು ಊಟ (2ನೇ ಪುಟಕ್ಕೆ)

## ಕಾಂಗ್ರೆಸ್ ಸದಸ್ಯತ್ವ ಪಡೆದು ದೇಶ ರಕ್ಷಿಸಿ

### ಕಾಂಗ್ರೆಸ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಯುವಕರಿಗೆ ಎಸ್ಸೆಸ್ಸೆಂ ಕರೆ



ದಾವಣಗೆರೆ, ಡಿ.19- ಇಂದು ದೇಶದಲ್ಲಿ ಭಯದ ವಾತಾವರಣ ನಿರ್ಮಿಸಿರುವ ಆಡಳಿತ ಪಕ್ಷದಿಂದ ದೇಶದ ಜನತೆ ಬೇಸತ್ತಿದ್ದು, ಇಂತಹ ಜನ ವಿರೋಧಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದ್ದು, ಯುವಕರು ಕಾಂಗ್ರೆಸ್ ಸದಸ್ಯತ್ವವನ್ನು ಪಡೆಯುವ ಮೂಲಕ ದೇಶ ರಕ್ಷಿಸಲು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕೆಂದು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಕರೆ ನೀಡಿದರು.

ತಮ್ಮ ಜನಸಂಪರ್ಕ ಕಚೇರಿಯಲ್ಲಿ ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಹರೀಶ್ ಬಸಾಪುರ ಅವರಿಗೆ 105 ರೂ. ನೀಡುವುದರ ಮೂಲಕ ಆಕ್ಟಿವ್ ಸದಸ್ಯತ್ವ ಪಡೆದು ನಂತರ ಅವರು ಮಾತನಾಡಿದರು.

ತುಂಬಾ ಸಂತೋಷ ಆಗುತ್ತಿದೆ. ಕಾಂಗ್ರೆಸ್ ಅಂತ ಹೇಳಿದರೆ ಹೋರಾಟ, ದೇಶಗಳಲ್ಲಿ ಕಾಂಗ್ರೆಸ್ (2ನೇ ಪುಟಕ್ಕೆ)

## ಮಾನ್ಯತೆ ಪಡೆಯದ ದೇಶಗಳ ಸಮಾರಂಭದಲ್ಲಿ ಭಾಗಿಯಾಗಬಾರದು

**ಬೋಧಕರಿಗೆ ಕೇಂದ್ರ ಸೂಚನೆ**

ನವದೆಹಲಿ ಡಿ. 19 – ಭಾರತ ಸರ್ಕಾರ ಮಾನ್ಯತೆ ನೀಡದ ದೇಶಗಳು ಆಯೋಜಿಸುವ ಸಮಾವೇಶಗಳಲ್ಲಿ ಬೋಧಕ ಸಿಬ್ಬಂದಿ ಭಾಗವಹಿಸಲು ಅವಕಾಶ ನೀಡದಂತೆ ಎಲ್ಲಾ ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಕಾಲೇಜುಗಳಿಗೆ ಎ.ಐ.ಸಿ.ಟಿ.ಇ. (ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಲಕ್ ಎಜುಕೇಷನ್) ಆದೇಶ ಹೊರಡಿಸಿದೆ.

ರಿಪಬ್ಲಿಕ್ ಆಫ್ ಸಿಪ್ರಸ್ ಆಯೋಜಿಸಿದ್ದ ಸಮಾವೇಶದಲ್ಲಿ ಭಾರತದ ಬೋಧಕರು ಪಾಲ್ಗೊಂಡ ಬಗ್ಗೆ ಸಿಪ್ರಸ್ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿ ವಿದೇಶಾಂಗ ಸಚಿವಾಲಯಕ್ಕೆ ಪತ್ರ ಬರೆದಿತ್ತು. ಕಳೆದ ನವೆಂಬರ್ 8ರಿಂದ 12ರವರೆಗೆ ಸಮಾವೇಶ ನಡೆದಿತ್ತು. ರಿಪಬ್ಲಿಕ್ ಆಫ್ ಸಿಪ್ರಸ್ ಅಕ್ರಮವಾಗಿ ವಶಪಡಿಸಿಕೊಂಡಿರುವ ಜಾಗದಲ್ಲಿರುವ ನಾರ್ತ್ ಈಸ್ಟ್ ಯೂನಿವರ್ಸಿಟಿಯು ಆನ್‌ಲೈನ್ ಮೂಲಕ ಸಮಾವೇಶ ನಡೆಸಿತ್ತು. ಇದರಲ್ಲಿ ಭಾರತೀಯ ಶೈಕ್ಷಣಿಕ ತಜ್ಞರು ಭಾಗಿಯಾದ ಬಗ್ಗೆ ಉಚ್ಚಾಯೋಗ ತೀವ್ರ ಕಳವಳ ವ್ಯಕ್ತಪಡಿಸಿತ್ತು.

## ಕೊಟ್ಟೂರಿನಲ್ಲಿ ಇಂದು ಕಾರ್ತಿಕ




ಭಕ್ತರ ಆರಾಧ್ಯ ದೈವ ಕೊಟ್ಟೂರಿನ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ ಕಡೇ ಕಾರ್ತಿಕೋತ್ಸವ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ. ಕಾರ್ತಿಕೋತ್ಸವದಲ್ಲಿ ಭಕ್ತರು ಕೋವಿಡ್ ನಿಯಮಾವಳಿ ಅನುಸರಿಸಲು ದೇವಸ್ಥಾನ ಸಮಿತಿ ಕೋರಿದೆ.


**ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಡೇ ಕಾರ್ತಿಕೋತ್ಸವ ಇಂದು**



ಪದ್ದತಿ ಪ್ರಕಾರ ದಿನಾಂಕ 20.12.2021ನೇ ಸೋಮವಾರ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾ ಸ್ವಾಮಿಯ ಕಡೇ ಕಾರ್ತಿಕೋತ್ಸವ ನಡೆಯಲಿದೆ. ಇದರ ಅಂಗವಾಗಿ ಸ್ವಾಮಿಯ ಗದ್ದಿಗೆಗೆ ಹೂವಿನ ಅಲಂಕಾರ ಸೇವೆಯನ್ನು ಶ್ರೀಮತಿ ನಾಗರತ್ನಮ್ಮ ಶ್ರೀ ಚಂದ್ರಶೇಖರ್ ಇಟಿಗಿ ಮತ್ತು ಕುಟುಂಬ ವರ್ಗದವರು, ಹುಬ್ಬಳ್ಳಿ ಇವರಿಂದ ಮತ್ತು ಸಂಜೆ ಕಾರ್ತಿಕ ದೀಪೋತ್ಸವವನ್ನು ದೇವಸ್ಥಾನದ ಆವರಣದಲ್ಲಿ ನಡೆಸಲಾಗುವುದು.

ಶ್ರೀ ಮಾಗಾನಹಳ್ಳಿ ಷಣ್ಮುಖಪ್ಪ ಇವರ ಜ್ಞಾಪಕಾರ್ಥವಾಗಿ ಶ್ರೀ ಶಿವಾನಂದ ಸ್ಟೋರ್ಸ್ ಇವರಿಂದ 'ಪಿಡಿಮದ್ದಿನ' ಕಾರ್ಯಕ್ರಮ ಏರ್ಪಡಿಲಾಗಿದೆ.



ಸರ್ವಭಕ್ತಾದಿಗಳು ಸಕಾಲಕ್ಕೆ ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ) ಮತ್ತು ರಥೋತ್ಸವ ಸಮಿತಿ, ಚೌಕಿಪೇಟೆ, ದಾವಣಗೆರೆ.

# ಹರಿಹರದ ತುಂಗಭದ್ರಾ ಕ್ರೆಡಿಟ್ ಸೊಸೈಟಿಗೆ 3.32 ಕೋಟಿ ಲಾಭ



ಹರಿಹರ, ಡಿ. 19 - ತಂಡವಾಗಿ ಒಗ್ಗಟ್ಟಿನಿಂದ ಕೆಲಸ ಮಾಡಿದ ಪರಿಣಾಮವಾಗಿ ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ 3 ಕೋಟಿ 32 ಲಕ್ಷ ರೂಪಾಯಿ ಲಾಭ ಗಳಿಸುವ ಮೂಲಕ ಜಿಲ್ಲೆಯಲ್ಲಿ ಸಂಸ್ಥೆ ಉತ್ತಮವಾಗಿ ಬೆಳೆದಿದೆ ಎಂದು ಸೊಸೈಟಿ ಅಧ್ಯಕ್ಷ ಡಿ. ಹೇಮಂತ್ ರಾಜ್ ಹರ್ಷ ವ್ಯಕ್ತಪಡಿಸಿದರು.

ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ದಿ ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 37ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸದಸ್ಯರಿಗೆ ಶೇ.16 ರಂತೆ ಡಿವಿಡೆಂಡ್ ನೀಡಲಾಗುತ್ತದೆ ಎಂದು ಹೇಳಿದರು.

ಗ್ರಾಹಕರು ಸರಿಯಾದ ಸಮಯಕ್ಕೆ ಮರು ಪಾವತಿ ಮಾಡಿದಾಗ ಸಂಸ್ಥೆ ಪ್ರಗತಿಯಾಗುತ್ತದೆ. ನಮ್ಮ ಗ್ರಾಹಕರು ಕೊರೊನಾ ಸಂಕಷ್ಟದ ಸಮಯದಲ್ಲೂ ಸಹ ಸೊಸೈಟಿಯಿಂದ ಪಡೆದ ಸಾಲವನ್ನು ಸರಿಯಾದ ರೀತಿಯಲ್ಲಿ ಮರುಪಾವತಿ ಮಾಡಿದ್ದರ ಫಲವಾಗಿ ಜಿಲ್ಲೆಯಲ್ಲಿ ಪ್ರಥಮ ಶ್ರೇಣಿಯ ಸೊಸೈಟಿ ಎಂಬ ಹೆಗ್ಗಳಿಕೆ ಗಳಿಸಿದೆ ಎಂದರು.

ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯನ್ನು ಪ್ರಾರಂಭದಲ್ಲಿ 40 ಕೋಟಿ ಬಂಡವಾಳದೊಂದಿಗೆ ಪ್ರಾರಂಭ ಮಾಡಿದ್ದು, ಇಂದಿಗೆ 5,349 ಸಂಘದ ಸದಸ್ಯರಿದ್ದು, ಇದರಲ್ಲಿ 2,721 ಸಹ ಸದಸ್ಯರಿಂದ 3,00,65,986 ರೂಪಾಯಿ ಷೇರು ಬಂಡವಾಳ ಹೊಂದಿದೆ, ಈ ಆರ್ಥಿಕ ವರ್ಷದಲ್ಲಿ 5.12 ಕೋಟಿ ಠೇವಣಿ ಸಂಗ್ರಹಿಸುವುದರೊಂದಿಗೆ ಸಂಘದ ಒಟ್ಟು ಠೇವಣಿ 47.99 ಕೋಟಿಗಳಿಂದ ರೂ 53.11 ಕೋಟಿಗಳಿಗೆ ಏರಿಕೆಯಾಗಿದೆ ಎಂದರು.

**ಸಂಘದ 37ನೇ ವಾರ್ಷಿಕ ಸಭೆಯಲ್ಲಿ ಸಹಕಾರಿ ಅಧ್ಯಕ್ಷ ಹೇಮಂತ್ ರಾಜ್ ಹರ್ಷ**

ತುಂಗಭದ್ರಾ ಕ್ರೆಡಿಟ್ ಸೊಸೈಟಿ ನಿರ್ದೇಶಕ ಹಾಗೂ ಸಂಸ್ಥಾಪಕ ಅಧ್ಯಕ್ಷ ಎಂ. ಶಿವಾನಂದಪ್ಪ ಮಾತನಾಡಿ, ಸಂಘವು ಕೇವಲ ಸಾಲ ಮತ್ತು ಮುಂಗಡಗಳನ್ನು ನೀಡಿ ಲಾಭವನ್ನು ಗಳಿಸುವ ಉದ್ದೇಶವನ್ನಿಟ್ಟುಕೊಳ್ಳದೇ ಸಂಘದ ಸದಸ್ಯರಿಗೆ ಇತರೆ ಸೇವೆಗಳನ್ನು ಒದಗಿಸುತ್ತಿದೆ.

ಸದಸ್ಯರ ಮರಣೋತ್ತರ ನಿಧಿ ಯಿಂದ ಮರಣ ಹೊಂದಿದ ಸದಸ್ಯರ ವಾರಸುದಾರರಿಗೆ 1,97,000 ರೂ.ಗಳನ್ನು 40 ಜನರಿಗೆ ನೀಡಲಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಶೇ. 85 ಕ್ಕೂ ಹೆಚ್ಚು ಅಂಕಗಳನ್ನು ಪಡೆದ 24 ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಜಿ. ಶರತ್ ವಾರ್ಷಿಕ ವರದಿ ಓದಿದರು. ವಿಶೇಷ ಆಹ್ವಾನಿತರಾದ ಶಿವಪ್ರಕಾಶ್ ಶಾಸ್ತ್ರಿ ಸೊಸೈಟಿ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಆರ್.ಕೆ. ಮಂಜುನಾಥ್, ನಿರ್ದೇಶಕರಾದ ಎಂ. ಶಿವಾನಂದಪ್ಪ, ಜಿ.ಎಸ್. ಚೆನ್ನಬಸಪ್ಪ, ಸೈಯದ್ ಇಫ್ತೇಕಾರ್ ಅಹ್ಮದ್, ಜಿ. ಮಂಜಪ್ಪ, ಪಿ. ಶಿವಣ್ಣ, ಎಂ. ಹನುಮಂತಪ್ಪ, ಪ್ರಕಾಶ್ ದಿವಟೆ, ಕೆ.ಬಿ. ಮಂಜುನಾಥ್, ಸಂಜಯ್ ಮಂಜುನಾಥ್, ಎಲ್.ಪಿ. ಮಮತ, ಎ.ಬಿ. ಗಂಗಮ್ಮ, ವಿಶೇಷ ಆಹ್ವಾನಿತರು ರುದ್ರೇಶ್ ಕೆ.ವಿ. ಶಿವಪ್ರಕಾಶ್ ಶಾಸ್ತ್ರಿ, ಸಿಬ್ಬಂದಿಗಳಾದ ಜಿ.ಎಂ. ಗಾಯತ್ರಿ, ಎ.ಎನ್. ರಾಧ, ಕೆ. ಲಿಂಗರಾಜ್, ಡಿ.ಇ. ಸಂತೋಷಕುಮಾರ್, ಜಿ.ಆರ್. ವಿನಾಯಕ ಹೆಚ್. ಕೃಷ್ಣ, ಪಿಗ್ಮಿ ಸಂಗ್ರಹಕರಾದ ಜಿ.ಎಂ. ಮೋಹನ್, ಹಾಲೇಶಪ್ಪ ಜಿ., ಎಂ.ಬಿ. ಮಹೇಂದ್ರ, ಹೆಚ್.ಎ. ಆಂಜನೇಯ, ಹೆಚ್. ವೈ. ಮಾರುತಿ, ನಾಗರಾಜ್ ವಿ. ದೇವರಹಳ್ಳಿ, ಎಂ. ಹನುಮಂತಪ್ಪ, ಎನ್.ಎಸ್. ಉಮೇಶ್, ಎಸ್. ಪ್ರಭಾಕರ್, ಜಿ.ಕೆ. ಸುರೇಶ್, ಕೆ.ಸಿ. ಶಿವಶಂಕರ್, ಕೆ.ಬಿ. ಶಿವಕುಮಾರ್, ಎನ್.ಸಿ. ವಿಜಯಕುಮಾರ್, ಎಸ್.ಎನ್. ಬಸವರಾಜ್, ಹೆಚ್.ಕೆ. ಮಂಜುನಾಥ್, ಹಾಲೇಶ್ ಬಾವಿಕಟ್ಟಿ ಹಾಗೂ ಇತರರು ಉಪಸ್ಥಿತರಿದ್ದರು.

## ವಕೀಲರು ಸಾಮಾಜಿಕ ವೈದ್ಯರು

**(1ನೇ ಪುಟದಿಂದ)** ನ್ಯಾಯಮೂರ್ತಿ ಪ್ರಸಾದ್ ಅಭಿಪ್ರಾಯ ಪಟ್ಟರು.

ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದ ಪ್ರಸಾದ್ ಅವರು, ಸಂವಿಧಾನ ರಚನೆಯ ಉದ್ದೇಶಗಳನ್ನು ವಿವರಿಸುತ್ತಾ, ಬಡತನ ಹಾಗೂ ಅಜ್ಞಾನದ ನಿವಾರಣೆ, ಪ್ರತಿಯೊಬ್ಬ ವ್ಯಕ್ತಿಯ ಪೂರ್ಣ ಬೆಳವಣಿಗೆಗೆ ಸಮಾನ ಅವಕಾಶ ಕಲ್ಪಿಸುವುದು ಸಂವಿಧಾನ ರಚನೆಯ ಆಶಯವಾಗಿರಬೇಕು ಎಂದು ಹೇಳಿದ್ದರು. ಅಂತಿಮವಾಗಿ ಸಂವಿಧಾನ ರಚನೆಯಾದಾಗ ಅದರ ಮುನ್ನುಡಿಯಲ್ಲೇ ಈ ಆಶಯಗಳು ಬಿಂಬಿತವಾಗಿದ್ದವು ಎಂದು ಅವರು ತಿಳಿಸಿದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಕೊಡುಗೆ ನೀಡಿದ್ದ. ಆಗ ಜನಸಂಖ್ಯೆ 32 ಕೋಟಿ ಆಗಿತ್ತು. ಈಗ ಜನಸಂಖ್ಯೆ 132 ಕೋಟಿ ಆಗಿರುವ ಸಂದರ್ಭದಲ್ಲಿ, ಸಮಾಜಕ್ಕೆ ಕೊಡುಗೆ ನೀಡುವ ಅಗತ್ಯ ಅಂದಿಗಿಂತ ಇಂದು ಹೆಚ್ಚಾಗಿದೆ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದವರು ಹೇಳಿದರು.

ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ ಮಾತನಾಡಿ, ವಕೀಲರು ಹೊಸ ಕಾಯ್ದೆಗಳು ಹಾಗೂ ತಿದ್ದುಪಡಿಗಳನ್ನು ಹೆಚ್ಚಾಗಿ ಅರ್ಥ ಮಾಡಿಕೊಂಡಷ್ಟೂ ನ್ಯಾಯಮೂರ್ತಿಗಳು ಉತ್ತಮ ತೀರ್ಪು ನೀಡಲು ನೆರವಾಗುತ್ತದೆ ಎಂದು ಹೇಳಿದರು.

ಅಖಿಲ ಭಾರತ ಅಧಿವಕ್ತಾ ಪರಿಷತ್ ರಾಜ್ಯಾಧ್ಯಕ್ಷ ರವೀಂದ್ರನಾಥ್ ಮಾತನಾಡಿ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪರಿಷತ್ತನ್ನು ಆರಂಭಿಸಲಾಗಿತ್ತು. ರಾಷ್ಟ್ರೀಯ ವಿಚಾರಧಾರೆಯನ್ನು ಕಾನೂನುಗಳಲ್ಲಿ ಅಳವಡಿಕೆ ಕುರಿತು ಪರಿಷತ್ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಹಲವು ಹಂತಗಳಲ್ಲಿ ನ್ಯಾಯ ಕೇಂದ್ರಗಳನ್ನು ಸ್ಥಾಪಿಸಿ, ಬಡವರು ನ್ಯಾಯ ಪಡೆಯಲು ನೆರವಾಗುತ್ತಿದೆ ಎಂದರು.

ಅಖಿಲ ಭಾರತ ಅಧಿವಕ್ತಾ ಪರಿಷತ್ ರಾಜ್ಯ ಉಪಾಧ್ಯಕ್ಷ ವೈ. ಮಂಜಪ್ಪ ಕಾಕನೂರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್, ಪರಿಷತ್ ರಾಷ್ಟ್ರೀಯ ಸಮಿತಿ ಸದಸ್ಯೆ ಅನಿತ ಉಪಸ್ಥಿತರಿದ್ದರು. ಪರಿಷತ್ ಜಿಲ್ಲಾ ಅಧ್ಯಕ್ಷ ಎಲ್. ದಯಾನಂದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

## ಗುರುದ್ವಾರದಲ್ಲಿ ಹತ್ಯೆ

**(1ನೇ ಪುಟದಿಂದ)** ಮಾಡುತ್ತಿದ್ದರು. ಗುರುದ್ವಾರದ ಕೆಲಸಗಾರರು ಬಂದಾಗ ಓಡಿ ಹೋಗಲು ಯತ್ನಿಸಿದ. ಗುರುದ್ವಾರದವರು ಆತನನ್ನು ಹಿಡಿದು ಕೂಡಿ ಹಾಕಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಬಗ್ಗೆ ತಿಳಿದ ಪೊಲೀಸರು 20ರ ವಯಸ್ಸಿನ ವ್ಯಕ್ತಿಯನ್ನು ಇರಿಸಿದ್ದ ಗುರುದ್ವಾರದ ಕೋಣೆಗೆ ತೆರಳಿದರು. ಅಲ್ಲಿ ನೆರೆದಿದ್ದ ಗ್ರಾಮಸ್ಥರು ಹಾಗೂ ಸಿಖ್ ಸಂಘಟನೆಗಳ ಸದಸ್ಯರು ವ್ಯಕ್ತಿಯನ್ನು ಪೊಲೀಸರು ಕರೆದೊಯ್ಯಲು ಬಿಡಲಿಲ್ಲ. ಲಾಠಿ, ಖಡ್ಗ ಹಿಡಿದಿದ್ದ ಕೆಲವರು ಬಲವಂತ ವಾಗಿ ಕೋಣೆಗೆ ನುಗ್ಗಿ ಪೊಲೀಸರ ಮೇಲೆ ಹಲ್ಲೆ ನಡೆಸಿದರು. ವ್ಯಕ್ತಿಯ ಮೇಲೆ ತೀವ್ರ ದಾಳಿ ನಡೆಸಿದರು. ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆಗೆ ಸಾವು ಸಂಭವಿಸಿತ್ತು.

ನಂತರ ಹೇಳಿಕೆ ನೀಡಿರುವ ಐ.ಜಿ.ಪಿ. ಗುರಿಂದರ್ ಸಿಂಗ್ ಧಿಲ್ಲೋನ್, ಗುರುದ್ವಾರದಲ್ಲಿ ಯಾವುದೇ ಅಪಚಾರ ನಡೆದಿಲ್ಲ. ಗುರು ಗ್ರಂಥ ಸಾಹಿಬ್ ಗ್ರಂಥ ಸೇರಿದಂತೆ ಎಲ್ಲವೂ ಸರಿಯಾಗಿದೆ ಎಂದಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಎಸ್ಪಿ ಹರಕ ಮಲ್‌ಪ್ರೀತ್ ಸಿಂಗ್ ಖಾಖ್, ಕಳ್ಳತನ ಮಾಡಲು ವ್ಯಕ್ತಿ ಗುರುದ್ವಾರಕ್ಕೆ ತೆರಳಿದ್ದ ಎಂದಿದ್ದಾರೆ.

ಈ ನಡುವೆ, ಹತ್ಯೆಗೀಡಾದ ವ್ಯಕ್ತಿಯ ವಿರುದ್ಧ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ 295-ಎ ಸೆಕ್ಷನ್ ಅಡಿ ಗುರುದ್ವಾರದ ವ್ಯವಸ್ಥಾಪಕ ಅಮರ್‌ಜಿತ್ ಸಿಂಗ್ ಪ್ರಕರಣ ದಾಖಲಿಸಿದ್ದಾರೆ.

## ಮೋದೀಜಿ ಸಮಯ ಮುಗಿಯಿತು



**(1ನೇ ಪುಟದಿಂದ)** ಚುನಾವಣೆಗಳಲ್ಲೂ ನೀಡಲಿದ್ದಾರೆ ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಕಾರ್ಯವ್ಯಾಪ್ತಿ ಯಲ್ಲಿನ ಯಾವುದೇ ಸಮಸ್ಯೆಗಳಿದ್ದರೂ ನೇರವಾಗಿ ನನ್ನನ್ನು ಸಂಪರ್ಕಿಸಿ. ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಶ್ರಮಿಸುತ್ತೇನೆ ಎಂದ ಅವರು, ಕಾಂಗ್ರೆಸ್ ಕಾರ್ಯಕರ್ತರು ಈಗಿರುವ ಹುರುಪನ್ನೇ ಕಾಯ್ದುಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ಮಾತನಾಡಿ, ಕಾಂಗ್ರೆಸ್ ಪಕ್ಷ ಸರ್ವ ಜನರಲ್ಲಿ ಸಮಾನತೆ ಕಾಣುತ್ತದೆ ಎಂಬುದಕ್ಕೆ ಸಲೀಂ ಅಹ್ಮದ್ ಅವರ ಆಯ್ಕೆಯೇ ಉದಾಹರಣೆ ಎಂದರು.

ಬಿ.ಎಸ್. ಮರದ ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ, ಬರಲಿರುವ ವಿಧಾನಸಭೆ ಚುನಾವಣೆಯಲ್ಲಿ ಕೆ.ಬಿ.ಕೋಳಿವಾಡರ ಪುತ್ರ ಪ್ರಕಾಶ ಕೋಳಿವಾಡ ಅವರು ಪಕ್ಷದ ಅಭ್ಯರ್ಥಿಯಾಗಲಿದ್ದು, ಅವರನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಕೈಗೆ ಆಡಳಿತ ನೀಡುವಂತೆ ಮನವಿ ಮಾಡಿದರು.

ಮುಖಂಡರುಗಳಾದ ಆರ್.ಎಂ. ಕುಬೇರಪ್ಪ, ಪುಟ್ಟಪ್ಪ ಮರಿಯಮ್ಮನವರ, ರವಿ ಪಾಟೀಲ, ಕೃಷ್ಣಪ್ಪ ಕಂಬಳಿ, ಶೇರು ಕಾಬೂಲಿ, ವೀರನಗೌಡ ಪೋಲಿಸಗೌಡ್ರ ಉಪಸ್ಥಿತರಿದ್ದರು. ಮಂಜನಗೌಡ ಪಾಟೀಲ ಸ್ವಾಗತಿಸಿದರು. ಇರ್ಫಾನ್ ದಿಡಗೂರ ನಿರೂಪಿಸಿದರು.

## ದುಪ್ಪಟ್ಟು ತಡೆಗೆ ಆಧಾರ್ ಲಿಂಕ್

**(1ನೇ ಪುಟದಿಂದ)** ವಯೋಮಾನವನ್ನು ಮಾತ್ರ ಮತದಾರರ ಪಟ್ಟಿಗೆ ಸೇರ್ಪಡೆಗೆ ಪರಿಗಣಿಸಲಾಗುತ್ತಿದೆ. ಜನವರಿ 1ರಂದು 18 ವರ್ಷ ತುಂಬದವರು, ಮತದಾರರಾಗಲು ಇಡೀ ವರ್ಷ ಕಾಯಬೇಕಿದೆ.

ಮುಂದಿನ ದಿನಗಳಲ್ಲಿ ಜನವರಿ 1, ಏಪ್ರಿಲ್ 1, ಜುಲೈ 1 ಹಾಗೂ ಅಕ್ಟೋಬರ್ 1ರಂದು 18 ವರ್ಷ ತುಂಬುವವರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವ ಅವಕಾಶ ಪಡೆಯಲಿದ್ದಾರೆ.

ಇನ್ನೊಂದು ತಿದ್ದುಪಡಿಯ ಮೂಲಕ ಮತದಾರರರ ಪಟ್ಟಿಯನ್ನು ಲಿಂಗ ತಟಸ್ಥಗೊಳಿಸಲಾಗುವುದು. ಪತ್ನಿ ಎಂಬ ಹೆಸರಿನ ಬದಲು ಸಂಗಾತಿ ಎಂಬ ಪದವನ್ನು ಬಳಸಲಾಗುವುದು. ಈಗಿರುವ ಪದ್ಧತಿಯಲ್ಲಿ ಸೈನಿಕನೊಬ್ಬನ ಪತ್ನಿ ಸೇವಾ ಮತದಾರರಾಗಲು ಅರ್ಹತೆ ಪಡೆದಿದ್ದಾರೆ. ಆದರೆ, ಮಹಿಳಾ ಸೈನಿಕ ಅಧಿಕಾರಿಯ ಪತಿ ಸೇವಾ ಮತದಾನ ಮಾಡಲು ಅಧಿಕಾರ ಹೊಂದಿಲ್ಲ. ಈ ಹಿನ್ನೆಲೆಯಲ್ಲಿ ಬದಲಾವಣೆ ಮಾಡಲಾಗುತ್ತಿದೆ.

## ಏರಿಕೆಯಾಗದ ಪತ್ರಿಕೆ ದರ

**(1ನೇ ಪುಟದಿಂದ)** ಹಿರಿಯ ಪತ್ರಕರ್ತ ನವೀನ್ ಕುಮಾರ್ ಮಾತನಾಡಿ, ಪತ್ರಿಕಾ ವಿತರಕರಿಗೆ ಸೂರು ಸಿಗುವಂತಾಗಬೇಕು ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಪತ್ರಿಕಾ ವಿತರಕರಿಗೆ ಗುರುತಿನ ಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ, ಪತ್ರಕರ್ತರುಗಳಾದ ಸತೀಶ್, ನಾಗರಾಜ್ ಬಡಿದಾಳ್, ಪ್ರಕಾಶ್, ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಹೆಚ್. ಚಂದ್ರು, ಉಪಾಧ್ಯಕ್ಷ ಕುಮಾರಸ್ವಾಮಿ ಇತರರು ಉಪಸ್ಥಿತರಿದ್ದರು.

## ಸಾರಥಿ ರೈತರಿಗೆ ಭತ್ತದ ಹಣ ಪಾವತಿ



ಹರಿಹರ

ಹರಿಹರ, ಡಿ. 19 - ತಾಲ್ಲೂಕಿನ ಸಾರಥಿ ಗ್ರಾಮದ 22 ರೈತರ ಭತ್ತವನ್ನು ಖರೀದಿ ಮಾಡಿದ್ದ ವರ್ತಕ ಪ್ರಶಾಂತ ಸ್ವಾಮಿ, ರೈತರಿಗೆ ನೀಡಬೇಕಾಗಿದ್ದ ಹಣವನ್ನು ಪಾವತಿಸಿದ್ದಾರೆ.

ಈ ವೇಳೆ ಮಾತನಾಡಿದ ಭತ್ತದ ವ್ಯಾಪಾರಿ ಪ್ರಶಾಂತ್ ಸ್ವಾಮಿ, ದೋಸ್ತಾನ ಸಾಮಿಲ್‌ನಲ್ಲಿ ತಾಂತ್ರಿಕ ತೊಡಕಾದ ಕಾರಣ ಭತ್ತ ಪಡೆಯಲು ಸ್ವಲ್ಪ ಸಮಯ ಬೇಕಾಯಿತು. ಹಣ ಪಾವತಿಗಾಗಿ ನ್ಯಾಯಾಲಯದಿಂದ ಸಮಯ ಪಡೆದಿದ್ದೆ ಎಂದಿದ್ದಾರೆ.

ಈಗ ತಾಂತ್ರಿಕ ಸಮಸ್ಯೆಗಳು ಬಗೆಹರಿದಿದ್ದು, ರೈತರಿಗೆ ಹಣ ಮರಳಿಸಿದ್ದೇನೆ ಎಂದವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಸಾರಥಿ ಗ್ರಾಮದ ಜಗದೀಶ್, ಕಿರಣ್, ಯಲ್ಲಪ್ಪ, ನಾಗಪ್ಪ, ಶಿವಕುಮಾರ್, ಹನುಮಂತಪ್ಪ, ಮಂಜಪ್ಪ, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಯೆನೆಪೋಯ ಆಸ್ಪತ್ರೆ ಉದ್ಘಾಟನೆ



ಹರಿಹರ, ಡಿ.19- ನಗರದ ಜನತೆಯ ಆರೋಗ್ಯದ ಹಿತ ದೃಷ್ಟಿಯಿಂದ ಮಂಗಳೂರಿನ ಯೆನೆಪೋಯ ಆಸ್ಪತ್ರೆಯವರು ನಗರದಲ್ಲಿ ಆರೋಗ್ಯ ಕೇಂದ್ರವನ್ನು ತೆರೆದಿರುವುದು, ಬಡವರಿಗೆ ಕಡಿಮೆ ದರದಲ್ಲಿ ಹೆಚ್ಚಿನ ಆರೋಗ್ಯ ಸೌಲಭ್ಯಗಳನ್ನು ಪಡೆಯಲು ದಾರಿಯಾಗಿದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಶಾಸಕ ಎಸ್.ರಾಮಪ್ಪ ಕರೆ ನೀಡಿದ್ದಾರೆ.

ನಗರದ ಶಿವಮೊಗ್ಗ ರಸ್ತೆಯ ಸಿದ್ದೇಶ್ವರ್ ಸಂಕೀರ್ಣದಲ್ಲಿ ಯೆನೆಪೋಯ ಆರೋಗ್ಯ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಮಲೇಬೆನ್ನೂರು ನಗರದಲ್ಲಿ ಕೇಂದ್ರವನ್ನು ತೆರೆಯುವಂತೆ ಸಲಹೆ ನೀಡಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದಿನಕ್ಕೊಂದು ಕಾಯಿಲೆ ಹರಡುತ್ತಿರುವುದರಿಂದ ಮನುಷ್ಯನಿಗೆ ಯಾವ ಸಮಯದಲ್ಲಿ ಯಾವ ಕಾಯಿಲೆ ಬರುತ್ತದೆ ಎಂದು ಊಹಿಸಲು ಅಸಾಧ್ಯ ಎನ್ನುವಂತಾಗಿದೆ. ಇಂತಹ ಸಮಯದಲ್ಲಿ ಹರಿಹರ ತಾಲ್ಲೂಕಿನ ಸುತ್ತಮುತ್ತಲಿನ ಜನರಿಗೆ ಕಡಿಮೆ ದರದಲ್ಲಿ ವೈದ್ಯಕೀಯ ಚಿಕಿತ್ಸೆ ನೀಡುವುದಕ್ಕೆ ಯೆನೆಪೋಯ ಆಸ್ಪತ್ರೆ ಮುಂದಾಗಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ರತ್ನ ಡಿ.ಉಜ್ಜೇಶ್, ತಾ.ಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಮಿಠಾಯಿ ರಾಘವೇಂದ್ರ, ಸೀನಿಯರ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ವಿಜಯಾನಂದ ಶೆಟ್ಟಿ, ಚೀಫ್ ಫಾರ್ಮಾಸಿಸ್ಟ್ ಮೊಹಮ್ಮದ್ ಆಶ್ರಫ್, ಸಿ.ಎನ್.ಹುಲಗೇಶ್, ಡಾ. ಪ್ರೀತಿ, ಮೊಹಮ್ಮದ್ ಅಲಿ, ಡಾ. ಇಬ್ರಾಹಿಂ ನಾಗನೂರು, ರುದ್ರೇಗೌಡ, ಡಾ. ನಾಗರಾಜ್ ಶೇಟ್, ಮುಗ್ದುಂ, ದಾದಾಪೀರ್ ಮತ್ತಿತರರು ಉಪಸ್ಥಿತರಿದ್ದರು.

## ಹೊನ್ನಾಳಿ : ಇಂದು ಶಿವ ಸೊಸೈಟಿ ಸಭೆ

ಶಿವ ಕ್ರೆಡಿಟ್ ಸೊಸೈಟಿ ಸಭೆಯು ಸಂಘದ ಅಧ್ಯಕ್ಷ ನ್ಯಾಮತಿ ಶ್ರೀಕಾಂತ್ ಅವರ ಅಧ್ಯಕ್ಷತೆಯಲ್ಲಿ ಗೊಲ್ಲರಹಳ್ಳಿಯ ತರಳಬಾಳು ಸಮುದಾಯ ಭವನದಲ್ಲಿ ಇಂದು ಬೆಳಗ್ಗೆ 11 ಕ್ಕೆ ನಡೆಯಲಿದೆ ಎಂದು ಕಾರ್ಯದರ್ಶಿ ರುದ್ರೇಶ್ ತಿಳಿಸಿದ್ದಾರೆ.

## ಕಾಂಗ್ರೆಸ್ ಸದಸ್ಯತ್ವ ಪಡೆದು ದೇಶ ರಕ್ಷಿಸಿ

**(1ನೇ ಪುಟದಿಂದ)** ಹೋರಾಟಕ್ಕೆ ದೊಡ್ಡ ಇತಿಹಾಸವಿದೆ. ಸದಸ್ಯತ್ವ ನೋಂದಣಿ ಕಾರ್ಯಕ್ರಮ ಬಹಳ ಹಳೆಯದು ಎಂದು ಹೇಳಿದರು.

ಈಗಾಗಲೇ ದಾವಣಗೆರೆಯಲ್ಲಿ ನೋಂದಣಿ ಆರಂಭಗೊಂಡಿದ್ದು, ಸದಸ್ಯತ್ವ ಪಡೆಯಲು ಯುವಕರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಇದು ಪಕ್ಷದ ಸಂಘಟನೆಗೆ ಅನುಕೂಲ ಎಂದು ತಿಳಿಸಿದರು.

ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ನೋಂದಣಿ ಕಾರ್ಯಕ್ರಮದ ಮೂಲಕ ಚಾಲನೆ ಕೊಡಲಾಗಿದ್ದು, ಬೂತ್ ಮಟ್ಟದಲ್ಲಿ ಸ್ಥಳೀಯ ಮುಖಂಡರು ಹೆಚ್ಚಿನ ಒತ್ತು ನೀಡಿ, ಪಕ್ಷದ ಸದಸ್ಯತ್ವ ನೀಡುವುದರ ಜೊತೆಗೆ ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ತಿಳಿಸಿಕೊಡಬೇಕು ಎಂದು ಅವರು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಕೆ.ಶೆಟ್ಟಿ, ಎಸ್. ಮಲ್ಲಿಕಾರ್ಜುನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಕೆ.ಜಿ.ಶಿವಕುಮಾರ್, ಅಯೂಬ್ ಪೈಲ್ವಾನ್, ಮಾಗಾನಹಳ್ಳಿ ಪರಶುರಾಮ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯ ಜಿ.ಎಸ್. ಮಂಜುನಾಥ್, ಬಸಾಪುರ ಕೊಟ್ರಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬೇತೂರು ಕರಿಬಸಪ್ಪ, ಬಾತಿ ಶಿವಕುಮಾರ್, ಸೈಯದ್ ಬಾಷಾ, ಸೈಯದ್ ಜಿಕ್ರಿಯಾ, ಸುಭಾನ್ ಸಾಬ್, ಶಿವಣ್ಣ, ಸಿದ್ದೇಶ್, ಯುವರಾಜ್ ಮತ್ತಿತರರಿದ್ದರು.

## ಪಿಬಿಯಿಂದ ಎವಿಕೆ ರಸ್ತೆ ಸಂಪರ್ಕ ಮಾರ್ಪಾಡು

**(1ನೇ ಪುಟದಿಂದ)** ಕಾಲೇಜು ರಸ್ತೆಯತ್ತ ತೆರಳಬೇಕಾಗಿದೆ.

ಶನಿವಾರ ಇದೇ ಸ್ಥಳದಲ್ಲಿ ಟಿಪ್ಪರ್ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದು ಮಹಿಳೆಯೊಬ್ಬಳು ಸ್ಥಳದಲ್ಲೇ ಸಾವನ್ನಪ್ಪಿದ್ದರು.

ಈ ಹಿನ್ನೆಲೆಯಲ್ಲಿ ಅವೈಜ್ಞಾನಿಕ ಸಂಚಾರ ತಡೆಯುವ ಉದ್ದೇಶದಿಂದ ಇಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ರಸ್ತೆ ಬಂದ್ ಮಾಡಲಾಗಿದೆ.


**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಬೇಕಾಗಿದ್ದಾರೆ**
ಸೌತ್ ಭಟ್ಟರು, ಬೆಣ್ಣೆ ದೋಸೆ ಭಟ್ಟರು, ಚೈನೀಸ್ & ಚಾಟ್ಸ್ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
90601 72745

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡ ಬಾತಿ) ಸಂಪರ್ಕಿಸಿ
88920 08800

**ಮಳಿಗೆ ಬಾಡಿಗೆ ಇದೆ**
ನಿಜಲಿಂಗಪ್ಪ ಬಡಾವಣೆ ಮುಖ್ಯ ರಸ್ತೆಯಲ್ಲಿ 15x60 ಅಳತೆಯ ಗ್ರೌಂಡ್ ಫ್ಲೋರ್ ಅಟ್ಯಾಚ್ ಬಾತ್‌ರೂಂ, ಕ್ಲಿನಿಕ್, ಬ್ಯೂಟಿಪಾರ್ಲರ್, ಬ್ಯಾಂಕ್, ಡ್ಯಾನ್ಸ್ ಕ್ಲಾಸ್, ಪೈಪಿನ ಅಂಗಡಿಗೆ ಸೂಕ್ತವಾದ ಮಳಿಗೆ ಬಾಡಿಗೆಗೆ ಇದೆ.
94482 33844

**ಮನೆ ಲೀಸ್/ಬಾಡಿಗೆಗೆ**
ಲೋಕಿಕೆರೆ ಕೈಗಾರಿಕಾ ವಲಯ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಹತ್ತಿರವಿರುವ 2 BHK ಲಿಫ್ಟ್ ಕಾರ್ ಪಾರ್ಕಿಂಗ್, ನೀರಿನ ವ್ಯವಸ್ಥೆ, ಸುಸಜ್ಜಿತ 1 ಮನೆ ಲೀಸ್/ಬಾಡಿಗೆಗೆ ಇದೆ ವಿಚಾರಿಸಿ
99004 11110
99865 38099

**ಮಳಿಗೆಗಳು ಬಾಡಿಗೆ ಇವೆ**
ನರಸರಾಜ ರಸ್ತೆ, ಚೌಕಿಪೇಟೆ ಕ್ರಾಸ್‌ನಲ್ಲಿ 10x20 ಒಂದು ಮಳಿಗೆ, 10x10 ಎರಡು ಮಳಿಗೆ ಬಾಡಿಗೆಗೆ ಇವೆ.
98445 99922

**Space For Rent**
1st and 2nd Floor each 1650 sqft Suitable for Corporate Office, Stockist Poly Clinic Etc. 171/4 AB Shastry Bhavana, P.J.Extn 3rd Main Near Chetana hotel
98807 65683
97422 73362

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
B.Sc. B.Ed, D.Ed, M.Sc, M.A, B.A, B.Ed (English)
Little Champs Gurukulam
Near HKR Circle, College Road, Nittuvalli, Davanagere.
90609 06039, 98443 32559

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ದಾಟಿ ಬನಶಂಕರಿ, ಡಾಲರ್ಸ್ ಕಾಲೋನಿಯಲ್ಲಿ 30×40 30×40 West ಅಕ್ಕ-ಪಕ್ಕ, 30×47 East, 30×63 Corner, 40×63 West, 70×63 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
40×60 North ಮೂರು ಬೆಡ್ ರೂಮ್ ಮನೆ ಕುವೆಂಪು ಬಡಾವಣೆಯಲ್ಲಿ. 30×40 West, Two B.Room ಮನೆ ಹೊಸ ಮನೆ ಜಯನಗರದಲ್ಲಿ. 20×30 ಮನೆ J.H Patel ಬಡಾವಣೆಯಲ್ಲಿ. 30×40 North KHB 35 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶಿಕ್ಷಕಿಯರು ಬೇಕಾಗಿದ್ದಾರೆ**
B.A., B.Com, B.Sc ಹಾಗೂ PUC, NTC ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
99640 17729

**ಗೋಡೌನ್ ಬಾಡಿಗೆಗೆ ಇವೆ**
ನರಸರಾಜ ರಸ್ತೆ, ಚೌಕಿಪೇಟೆ ಕ್ರಾಸ್‌ನಲ್ಲಿ 12x30 ಎರಡು ಗೋಡೌನ, 30x30ರ ಒಂದು ಗೋಡೌನ್ ಬಾಡಿಗೆಗೆ ಇವೆ.
98445 99922

**JOBS**
Sales Manager/Executives Any Degree (English, Computer Knowledge) Office Job/Marketing/ Field Work, Male/Female Freshers/Experienced
98444 92888

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮನೆ ಅಡುಗೆ ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಊಟ, ತಿಂಡಿ ದೊರೆಯುತ್ತದೆ. ಮಸಾಲೆ ರಹಿತ ಆರೋಗ್ಯ ಪೂರ್ಣ ಆಹಾರಕ್ಕಾಗಿ ಸಂಪರ್ಕಿಸಿ. ಚಪಾತಿ, ರೊಟ್ಟಿ, ಪಲ್ಯ ದೊರೆಯುತ್ತದೆ.
Home Delivery FREE
63635 43487

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ನಂ. 1355, 1200 sft, 16ನೇ ಕ್ರಾಸ್, ತರಳಬಾಳು ಬಡಾವಣೆ, ಸೋಲಾರ್ ವ್ಯವಸ್ಥೆ ಇರುವ ನೂತನ ಬಿಲ್ಡಿಂಗ್.
88614 62603

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳೆಯರು ರ್ಯಾಕ್‌ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2

**ಡಾಗ್ ಬೋರ್ಡಿಂಗ್**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಜನತಾ ಖಾದಿ ಭಂಡಾರ
ಬಾಪೂಜಿ ಖಾದಿ ಭಂಡಾರ
ಅಶೋಕ ರಸ್ತೆ, ದಾವಣಗೆರೆ

**21ನೇ ವರ್ಷದ ಸವಿನೆನಪು**

ದಿ|| ವಿ.ಹೆಚ್. ಮಲ್ಲಿಕಾರ್ಜುನಪ್ಪ
B.Sc., B.E.
ನೀವು ನಮ್ಮನ್ನಗಲಿ ಇಂದಿಗೆ ಇಪ್ಪತ್ತೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ, ಮಗ, ಸೊಸೆ, ಮಗಳು ಹಾಗೂ ಮೊಮ್ಮಕ್ಕಳು
ದಾವಣಗೆರೆ.


**ಉಚ್ಚಂಗಿದುರ್ಗದ ಶ್ರೀಮತಿ ಶಾರದಮ್ಮ ನಿಧನ**



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮದ ವಾಸಿ ಮರುಳನಗೌಡ್ರ ಪುತ್ರ ದಿವಂಗತ ಹೆಚ್. ಶಿವನಾಗನ ಗೌಡರ ಧರ್ಮಪತ್ನಿ ಶ್ರೀಮತಿ ಶಾರದಮ್ಮನವರು (73) ಅವರು ದಿನಾಂಕ : 19.12.2021ರಂದು ಭಾನುವಾರ ಮಧ್ಯಾಹ್ನ 1:ಗಂಟೆಗೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು ಮತ್ತು ಮೊಮ್ಮಕ್ಕಳನ್ನು ಅಗಲಿರುವ. ಮೃತರ ಅಂತ್ಯಕ್ರಿಯೆಯು ದಿನಾಂಕ 20.12.2021 ಸೋಮವಾರ ಮಧ್ಯಾಹ್ನ 12:50ಕ್ಕೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

**ಹಳೇ ಕುಂದುವಾಡದ ಬೆಳ್ಳೂಡಿ ಕೆಂಚಪ್ಪ ನಿಧನ**



ದಾವಣಗೆರೆ ಹಳೇ ಕುಂದುವಾಡ ವಾಸಿ ಡಿ.ಎಸ್.ಎಸ್. ಜಿಲ್ಲಾ ಸಂಚಾಲಕ ಮಂಜುನಾಥ ಅವರ ತಂದೆ ಹಾಗೂ ವಿಎಸ್.ಎಸ್.ಎನ್. ಮಾಜಿ ನಿರ್ದೇಶಕ ಬೆಳ್ಳೂಡಿ ಕೆಂಚಪ್ಪ ಇವರು ದಿನಾಂಕ 19.12.2021ರಂದು ಭಾನುವಾರ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.12.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಹಳೇ ಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


**ಶಾಲಾ ವಾಹನಕ್ಕೆ ಸಂಪರ್ಕಿಸಿ**
ಮಾರುತಿ ಓಮಿನಿ ವಾಹನದಲ್ಲಿ ಯರಗುಂಟೆಯಿಂದ ಅಶೋಕ ನಗರ, ದೇವರಾಜ ಅರಸ್ ಬಡಾವಣೆ, ಪಿ.ಬಿ.ರಸ್ತೆ ಮೂಲಕ ಜೈನ್ ವಿದ್ಯಾಲಯ, ಗುಂಡಿ ಸ್ಕೂಲ್ ಮತ್ತು ಅನುಭವ ಮಂಟಪ ಶಾಲೆಗೆ ಮಕ್ಕಳನ್ನು ಬೆಳಿಗ್ಗೆ ಮತ್ತು ಸಂಜೆ ಬಿಟ್ಟು ಮತ್ತು ಕರೆದುಕೊಂಡು ಬರಲು ಸಂಪರ್ಕಿಸಿ
94823 14896

**ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕಾರ್ಯನಿರ್ವಹಿಸಲು PUC, BA/BSc B.Ed. ಆಗಿರುವ ಮೂವರು ಮಹಿಳಾ ವಾರ್ಡನ್‌ಗಳು ಹಾಗೂ BSc B.Ed. (PM) ಆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
91106 79096

**ಶಿಕ್ಷಕಿಯರು ಬೇಕಾಗಿದ್ದಾರೆ**
B.A. B.Ed - 2, B.Sc. B.Ed-2
ಮೌಂಟ್ ಎವರೆಸ್ಟ್ ವಿದ್ಯಾಲಯ
ನಿಟುವಳ್ಳಿ, ಜಯನಗರ, ದಾವಣಗೆರೆ.
91136 10789
97439 24203

**ಮನೆ ಬಾಡಿಗೆಗೆ ಇದೆ**
ವಾಸ್ತು ಹಾಗೂ ಸಕಲ ಸೌಕರ್ಯ ಉಳ್ಳ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. #1859/34, ಭಾವ ಸಂಗಮ, 4ನೇ ಮುಖ್ಯ ರಸ್ತೆ, LIC ಕಾಲೋನಿ, ನೂತನ ಕಾಲೇಜು ಹಿಂಭಾಗ ದಾವಣಗೆರೆ.
94487 46875

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ: ಪಿಯುಸಿ, ವಯಸ್ಸು 18 ವರ್ಷ ಮೇಲ್ಪಟ್ಟು, ವೇತನ ರೂ.9,000-12,000 ವರೆಗೆ ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು. ದ್ವಿಚಕ್ರವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿಎಲ್-ಆರ್‌ಸಿ ಕಾರ್ಡ್ ಹೊಂದಿರಬೇಕು. ಎಸ್.ಕೆ.ಎಸ್. ಅಗ್ರಿಟೆಕ್ ಪ್ಲಾಂಟೇಷನ್ ಪ್ರೈ.ಲಿ. ಎಸ್‌ಎಸ್ ಹೈಟೆಕ್ ಆಸ್ಪತ್ರೆ ಮುಖ್ಯರಸ್ತೆ, ಲಕ್ಷ್ಮಿ ಬಡಾವಣೆ, ದಾವಣಗೆರೆ.
89514 55892, 99023 42040, 81500 67146

**ಬೇಕಾಗಿದ್ದಾರೆ**
ಜಿ.ಎಂ.ಐ.ಟಿ ಅತಿಥಿ ಗೃಹದಲ್ಲಿ ಕಾರ್ಯನಿರ್ವಹಿಸಲು ಅನುಭವವುಳ್ಳ ಅಡುಗೆ ಭಟ್ಟರು, ಸೂಪರ್‌ವೈಜರ್, ಸರ್ವರ್‌ಗಳು ತಕ್ಷಣ ಬೇಕಾಗಿದ್ದಾರೆ.
84948 84444

**ಬೇಕಾಗಿದ್ದಾರೆ**
ಶ್ರೀ ವೀರಭದ್ರೇಶ್ವರ ಬೇಕರಿ (ಬೇಕರ್ ಪ್ಯಾಲೇಸ್) ಇಲ್ಲಿ ಬೇಕರಿ ತಿನಿಸುಗಳನ್ನು ತಯಾರಿಸಲು ಅನುಭವವುಳ್ಳ ತಯಾರಕರು (Bakery Item Makers) ಬೇಕಾಗಿರುತ್ತಾರೆ.
7676688599
9964177873

**ಧರ್ಮಸ್ಥಳ ಮಂಜುನಾಥ ಜೋತಿಷ್ಯಾಲಯ**
ಪ|| ಮಂಜುನಾಥ್ ಭಟ್, ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟ ಪಟ್ಟವರು ನಿಮ್ಮಂತಾಗಲು? ನಿಮ್ಮ ಸಂಕಷ್ಟಗಳೇನು ನಮ್ಮಲ್ಲಿ ಕೇಳಿ ತಿಳಿಯಿರಿ. ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಸಮಸ್ಯೆ, ದಾಂಪತ್ಯ ಸಮಸ್ಯೆ ನಿಮ್ಮ ಯಾವುದೇ ಸಮಸ್ಯೆಗಳನ್ನು 3 ದಿನಗಳಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಇಂದೇ ಸಂಪರ್ಕಿಸಿ
ಮೊ.82176 83615

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ಕುಡುಕರಿಗೆ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ಮೊ : 81339 33804

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**GST Registration, Income-Tax & GST Cases, NGO**
ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, Trust Registration, Project Report, Audit & For Account Maintenances.
Please Contact
MEGHANA ASSOCIATES ®
P.J.Extension, Davanagere.
Mob: 99809 16126

# ದಾವಣಗೆರೆ ದಕ್ಷಿಣ ವಿಧಾನಸಭೆ ರಾಜ್ಯಕ್ಕೇ ಮಾದರಿ : ಎಸ್ಸೆಸ್



ದಾವಣಗೆರೆ, ಡಿ.19- ದಾವಣಗೆರೆ ದಕ್ಷಿಣ ವಿಧಾನಸಭೆ ರಾಜ್ಯಕ್ಕೇ ಮಾದರಿ ಆಗುವ ನಿಟ್ಟಿನಲ್ಲಿ ಅಭಿವೃದ್ಧಿ ಆಗುತ್ತಿದ್ದು, ಸಾರ್ವಜನಿಕರು ಊಹಾಪೋಹಗಳಿಗೆ ಕಿವಿಗೊಡದೆ, ಅಭಿವೃದ್ಧಿಗೆ ಸಹಕರಿಸುವಂತೆ ಶಾಸಕ ಶಾಮನೂರು ಶಿವಶಂಕರಪ್ಪ ಕರೆ ನೀಡಿದರು.

ನಗರದ ವಾರ್ಡ್ ನಂಬರ್ 3 ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಸಂಜೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದಿನ ಸರ್ಕಾರದ ಅವಧಿಯಲ್ಲಿ ಸಾವಿರಾರು ಕೋಟಿ ರೂ.ಗಳನ್ನು ತಂದು ನಗರ ಮತ್ತು ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲಾಗಿದೆ ಎಂದರು.

ಪಾಲಿಕೆ ಸದಸ್ಯ ಎ.ಬಿ.ರಹೀಂಸಾಬ್ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಪಾಲಿಕೆ ಸದಸ್ಯರುಗಳಾದ ಜಾಕೀರ್, ಶಫೀಕ್ ಪಂಡಿತ್, ಎನ್.ಕೆ.ಇಸ್ಮಾಯಿಲ್, ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗದ ಸಹಾಯಕ ಅಭಿಯಂತರ ಹೆಚ್.ವೆಂಕಟೇಶ್, ಗುತ್ತಿಗೆದಾರರಾದ ರವಿಕುಮಾರ್, ರಾಮಬಾಬು, ಮುಖಂಡರುಗಳಾದ ಹಬೀಬ್ ಸಾಬ್, ಮಹ್ಮದ್ ಹರ್ಷದ್, ಅಕ್ಬರ್ ಅಲಿ, ಅಬ್ದುಲ್ ಜಬ್ಬಾರ್, ನಾಸೀರ್ ಸಾಬ್, ಅಲಿ, ಮಹಬೂಬ್, ಇಮ್ತಿಯಾಜ್ ಸೇರಿದಂತೆ ಹಲವರಿದ್ದರು.

# ಎಂಇಎಸ್ ಪುಂಡರ ಕೃತ್ಯ ಖಂಡಿಸಿ ಟಯರ್ ಸುಟ್ಟು ಆಕ್ರೋಶ



ದಾವಣಗೆರೆ, ಡಿ.19- ಬೆಳಗಾವಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಭಗ್ನಗೊಳಿಸಿರುವ ಎಂಇಎಸ್ ಪುಂಡರ ಕೃತ್ಯ ಖಂಡಿಸಿ ದಾಸಶ್ರೇಷ್ಠ ಶ್ರೀ ಕನಕದಾಸರು ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹೋರಾಟ ಸಮಿತಿ ಹಾಗೂ ಕರ್ನಾಟಕ ಸಮರ ಸೇನೆ ಕಾರ್ಯಕರ್ತರು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಪಿಬಿ ರಸ್ತೆಯಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಜಮಾಯಿಸಿದ ಪ್ರತಿಭನಾಕಾರರು, ರಾಯಣ್ಣರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಎಂಇಎಸ್ ಪುಂಡಾಟಿಕೆ ವಿರುದ್ಧ ಘೋಷಣೆ ಕೂಗಿ, ಟಯರ್‌ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾನಿರತರು ಟಯರ್ ಸುಡಲು ಮುಂದಾದಾಗ ಪೊಲೀಸರು ಅದನ್ನು ತಡೆಯಲು ಮುಂದಾದರು. ಆಗ ಪ್ರತಿಭಟನಾ ನಿರತರು ಮತ್ತು ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಪೊಲೀಸರು ಎಷ್ಟೇ ಮನವೊಲಿಸಲು ಮುಂದಾದರೂ ಪಟ್ಟು ಸಡಿಲಿಸದ ಪ್ರತಿಭಟನಾಕಾರರು ಟಯರ್ ಸುಟ್ಟು ಎಂಇಎಸ್ ಪುಂಡಾಟಿಕೆ ವಿರುದ್ಧ ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರು, ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಪುಂಡರು ಅಪ್ರತಿಮ ಸ್ವಾತಂತ್ರ್ಯ ಸೇನಾನಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿರುವುದು ಮತ್ತು ಸರ್ಕಾರಿ ವಾಹನಗಳನ್ನು ಗುರಿಯಾಗಿಸಿಕೊಂಡು ಕಲ್ಲು ತೂರಾಟ ನಡೆಸಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಕುರುಬ ಸಮಾಜದ ಹಿರಿಯ ಮುಖಂಡ ಪಿ.ರಾಜಕುಮಾರ್, ವಿವಿಧ ಸಂಘಟನೆಗಳ ಮುಖಂಡರಾದ ಬಿ.ಲಿಂಗರಾಜ, ದೀಟೂರು ಚಂದ್ರು, ಜೆ.ಡಿ.ಪ್ರಕಾಶ್, ಇಟ್ಟಿಗುಡಿ ಮಂಜುನಾಥ, ಡಾ.ಬಿ.ವಾಸುದೇವ, ಉಮೇಶ್ ಪಟೇಲ್, ರಾಜು ಮೌರ್ಯ, ಬಾಡದ ರವಿ, ಶಿವಣ್ಣ ಮೇಷ್ಟ್ರು, ಪರಶುರಾಮ್, ಉಮೇಶ್, ವೀರಣ್ಣ, ನವೀನ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ನಗರದಲ್ಲಿ ಲಾರಿಗಳ ಸಂಚಾರಕ್ಕೆ ಸಮಯ ನಿಗದಿಪಡಿಸಲು ಒತ್ತಾಯ



ದಾವಣಗೆರೆ, ಡಿ.19- ಇತ್ತೀಚೆಗೆ ನಗರದಲ್ಲಿ ಸರಣಿ ರಸ್ತೆ ಅಪಘಾತಗಳು ಹೆಚ್ಚಾಗುತ್ತಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲು ಮತ್ತು ಹೆವಿ ಲೋಡ್ ಲಾರಿಗಳು ನಗರದಲ್ಲಿ ಸಂಚರಿಸಲು ಬೆಳಿಗ್ಗೆ 5 ರಿಂದ 9 ಗಂಟೆಯವರೆಗೆ ಸಮಯ ನಿಗದಿಪಡಿಸಿ, ಸರಣಿ ಅಪಘಾತಗಳನ್ನು ತಪ್ಪಿಸಿ, ನಗರದಲ್ಲಿ ಆಗುತ್ತಿರುವ ಅಕಾಲಿಕ ಅಪಘಾತಗಳನ್ನು ತಪ್ಪಿಸಬೇಕೆಂದು ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಒತ್ತಾಯಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅವರಿಗೆ ಇಂದು ಮನವಿ ಸಲ್ಲಿಸಿದ ಅವರು, ಕಳೆದ ಒಂದು ವಾರದಿಂದ ನಗರಾದ್ಯಂತ ಹಲವಾರು ಅಪಘಾತಗಳು ಸಂಭವಿಸಿ, ಸಾವು-ನೋವುಗಳು ಉಂಟಾಗುತ್ತಿವೆ. ಈ ಅಪಘಾತಗಳಿಗೆ ರ್‍ಯಾಷ್ ಡ್ರೈವಿಂಗ್ ಕಾರಣವಾಗಿದ್ದು, ಅಲ್ಲದೇ ಸ್ಮಾರ್ಟ್ ಸಿಟಿ ಹಿನ್ನೆಲೆಯಲ್ಲಿ ಪ್ರತಿ ರಸ್ತೆಗಳು ಕೂಡಾ ಸಿಮೆಂಟೀಕರಣಗೊಂಡು ರಸ್ತೆ ಡಿವೈಡರ್‌ಗಳನ್ನು ಸಮರ್ಪಕವಾಗಿ ಅಳವಡಿಸದೇ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ತಿಳಿಸಿದರು.

ನಗರದಲ್ಲಿರುವ ಒಮ್ಮುಖ ರಸ್ತೆಗಳನ್ನು ಕಡ್ಡಾಯವಾಗಿ ಪಾಲಿಸಲು ಸದರಿ ರಸ್ತೆಗಳಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಬೇಕು ಹಾಗೂ ಕಾಲೇಜು ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ದ್ವಿಚಕ್ರ ವಾಹನಗಳಲ್ಲಿ 3-4 ಜನರು ಓಡಾಡುತ್ತಾ, ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಕೆ ಮಾಡುತ್ತಿರುವುದರಿಂದ ಇಂತಹ ಅಪಘಾತ ಗಳು ಸಂಭವಿಸುತ್ತಿದ್ದು, ಪ್ರಮುಖ ತಿರುವುಗಳಲ್ಲಿ ಕಡ್ಡಾಯವಾಗಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಅಪಘಾತಗಳಾಗುವುದನ್ನು ತಡೆಗಟ್ಟಬೇಕೆಂದು ನಾಗರಾಜ್ ಕೋರಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಅಯೂಬ್ ಪೈಲ್ವಾನ್, ಕೆ.ಜಿ. ಶಿವಕುಮಾರ್, ಮಹಾನಗರ ಪಾಲಿಕೆ ಸದಸ್ಯರಾದ ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಹುಲ್ಲುಮನೆ ಗಣೇಶ್, ಹರೀಶ್ ಬಸಾಪುರ, ಯುವರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಕ್ರೀಡಾ ಪ್ರೋತ್ಸಾಹ ನೀಡುತ್ತಿರುವ ಎಸ್ಸೆಸ್ಸೆಂ




ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್, ಬೆಂಚ್ ಪ್ರೆಸ್ ಚಾಂಪಿಯನ್ ಶಿಪ್ ಉದ್ಘಾಟನೆಯಲ್ಲಿ ದಿನೇಶ್ ಕೆ.ಶೆಟ್ಟಿ ಶ್ಲ್ಯಾಘನೆ

ದಾವಣಗೆರೆ, ಡಿ.19- ಶಾಮನೂರು ಮಲ್ಲಿಕಾರ್ಜುನ್ ಕ್ರೀಡಾ ಸಚಿವರಾಗಿದ್ದ ವೇಳೆ ಕ್ರೀಡೆಗಳಿಗೆ ನೀಡಿದ ಪ್ರೋತ್ಸಾಹ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತಹದ್ದು ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದರು.

ಕರ್ನಾಟಕ ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್ ಅಸೋಸಿಯೇಷನ್ ವತಿಯಿಂದ ವಿನೋಬನಗರದ ಶ್ರೀ ಸಿದ್ದಿವಿನಾಯಕ ಸಾಂಸ್ಕೃತಿಕ ಸಂಘದ ಆವರಣದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್, ಬೆಂಚ್ ಪ್ರೆಸ್ ಚಾಂಪಿಯನ್ ಶಿಪ್ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ನಗರದಲ್ಲಿ ಬಹುತೇಕ ಕ್ರೀಡೆಗಳಿಗೆ ತರಬೇತುದಾರರನ್ನು ನೇಮಿಸಿದ್ದರು. ಅಂದಿನಿಂದ ಇಂದಿನವರೆಗೂ ಅನೇಕ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯ ಆರ್. ಶಿವಾನಂದ ಮಾತನಾಡಿದರು.

ಕರ್ನಾಟಕ ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಕೆ.ಧರ್ಮರಾಜ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದ ಕ್ರೀಡಾಪಟು ಶ್ರೀಮತಿ ಲಕ್ಷ್ಮೀದೇವಿ ದಯಾನಂದ್ ಮತ್ತಿತರರಿದ್ದರು.

# ಫೆ.2ರಿಂದ ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ

ದಾವಣಗೆರೆ, ಡಿ.19- ಬಾಡಾ ಕ್ರಾಸ್ ಬಳಿ ಇರುವ ಶ್ರೀ ಗುರು ಪುಟ್ಟರಾಜ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆಶ್ರಯದಲ್ಲಿ ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆಯನ್ನು ಫೆಬ್ರವರಿ 2 ರಿಂದ ಮಾರ್ಚ್ 3 ರವರೆಗೆ ಏರ್ಪಡಿಸಲಾಗಿದೆ ಎಂದು ಭಜನಾ ಸ್ಪರ್ಧೆ ಸಮಿತಿಯ ಪ್ರಧಾನ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧಿಗಳ ತಂಡ ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳ ತತ್ವಪದ ಕನಿಷ್ಟ ಎರಡು ಹಾಡು ನಂತರ ಸಂತ ಶಿಶುನಾಳ ಶರೀಫರ, ಗುರು ಗೋವಿಂದ ಭಟ್ಟರ, ಬಸವಣ್ಣ, ಅಕ್ಕಮಹಾದೇವಿ ವಚನ, ಕನಕದಾಸರು, ಪುರಂದರದಾಸರ ಪದಗಳನ್ನು ಹಾಡಬಹುದಾಗಿದೆ ಎಂದು ಹೇಳಿದರು.

ಪ್ರಥಮ ಬಹುಮಾನ 50 ಸಾವಿರ, ದ್ವಿತೀಯ 40 ಸಾವಿರ, ತೃತೀಯ 30 ಸಾವಿರ, ನಾಲ್ಕನೇ ಬಹುಮಾನ 25 ಸಾವಿರ, ಐದನೇ ಬಹುಮಾನ 20 ಸಾವಿರ, ಆರನೇ ಬಹುಮಾನ 15 ಸಾವಿರ, ಏಳನೇ ಬಹುಮಾನ 10 ಸಾವಿರ ಹಾಗೂ 8ನೇ ಬಹುಮಾನ 5 ಸಾವಿರ ಮತ್ತು ಸಮಾಧಾನಕರ ಬಹುಮಾನ ಹತ್ತು ತಂಡಗಳಿಗೆ ತಲಾ ಮೂರು ಸಾವಿರ ರೂ. ನಗದು ಪುರಸ್ಕಾರ ನೀಡಲಾಗುವುದು ಎಂದು ಕಾರ್ಯಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದರು.

ವಿವರಕ್ಕೆ 6360058926, 9480176601ಗೆ ಸಂಪರ್ಕಿಸುವಂತೆ ಸಮಿತಿಯ ಕೋಶಾಧ್ಯಕ್ಷ ಜಿ.ಎನ್. ಕರಿಬಸಪ್ಪ ಜಾಲಿಮರದ ಹೇಳಿದರು.

ಸಂಘಟನಾ ಕಾರ್ಯದರ್ಶಿ ಎ.ಕೊಟ್ರಪ್ಪ ಕಿತ್ತೂರು, ಬಸವನಗೌಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

> **“ಸುಮಾರು 2.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಪಂಡಿತ ಪುಟ್ಟರಾಜ ಗವಾಯಿಗಳವರ ಶಿಲಾಮಂಟಪ ಉದ್ಘಾಟನೆ ಸಿದ್ಧವಾಗಿದ್ದು, ಫೆಬ್ರವರಿ 2 ರಂದು ಪೂರ್ವಭಾವಿಯಾಗಿ, ಸಾಂಕೇತಿಕವಾಗಿ ಉದ್ಘಾಟಿಸಲಾಗುವುದು. ಮಾರ್ಚ್ 3 ರಂದು ಲೋಕಾರ್ಪಣೆ ಮಾಡಲಾಗುತ್ತಿದ್ದು, ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಲಾಗುವುದು.**
>
> **- ಎ.ಹೆಚ್. ಶಿವಮೂರ್ತಿ ಸ್ವಾಮಿ**

## ಹರಪನಹಳ್ಳಿ ಇಂದು ಟಿಎಪಿಸಿಎಂಎಸ್ ಸಭೆ

ಹರಪನಹಳ್ಳಿ, ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆವರಣದಲ್ಲಿ 91ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಿಗ್ಗೆ 11 ಕ್ಕೆ ಸಂಘದ ಅಧ್ಯಕ್ಷ ಎಲ್.ಬಿ. ಹಾಲೇಶನಾಯ್ಕ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಎಲ್.ಬಿ. ಹಾಲೇಶನಾಯ್ಕ ಹಾಗೂ ಕಾರ್ಯದರ್ಶಿ ಹೆಚ್. ತಿರುಪತಿ ತಿಳಿಸಿದ್ದಾರೆ.

## ಮಲೇಬೆನ್ನೂರು : ಇಂದು ಶಿವ ಸಹಕಾರಿಯ ಸಂಘದ ಮಹಾಸಭೆ

ಪಟ್ಟಣದ ಶಿವ ವಿವಿಧೋದ್ದೇಶ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಿಗ್ಗೆ 10.30ಕ್ಕೆ ಇಲ್ಲಿನ ನಂದಿಗುಂಡಿ ರಸ್ತೆಯಲ್ಲಿರುವ ವಾಸವಿ ಕಲ್ಯಾಣ ಮಂಟಪದಲ್ಲಿ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ಅವರ ಅಧ್ಯಕ್ಷತೆ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ವಿಶೇಷ ಆಹ್ವಾನಿತರಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ಎನ್.ಜಿ.ರುದ್ರಪ್ಪ ಅತಿಥಿಯಾಗಿ ಭಾಗವಹಿಸಲಿದ್ದಾರೆ.

## ಕೊಡದಗುಡ್ಡದಲ್ಲಿ ನಾಳೆ ವೀರಭದ್ರಸ್ವಾಮಿ ಕಾರ್ತಿಕೋತ್ಸವ

ಜಗಳೂರು, ಡಿ.19- ಕೊಡದಗುಡ್ಡ ಶ್ರೀ ವೀರಭದ್ರ ಸ್ವಾಮಿ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 21 ರ ಮಂಗಳವಾರ ನಡೆಯಲಿದೆ. ಅಂದು ಬಸವನಪೂಜೆ ಮತ್ತು ಅಂದು ರಾತ್ರಿ 7.30 ರಿಂದ ರಾತ್ರಿ 11 ರವರೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಬೆಳ್ಳಿ ಪಲ್ಲಕ್ಕಿ ಮಹೋತ್ಸವ, ಮಹಾ ಮಂಗಳಾರತಿ ನಡೆಯಲಿದೆ.

## ಸಂಚಾರಿ ಪೊಲೀಸರ ಜೊತೆ ಬೈಕ್ ಸವಾರನ ಜಗಳ

ದಾವಣಗೆರೆ, ಡಿ.19- ದಂಡ ಹಾಕಿದ ಹಿನ್ನೆಲೆಯ ಸಂಚಾರಿ ಪೊಲೀಸರ ಜೊತೆ ಬೈಕ್ ಸವಾರನೊಬ್ಬ ಜಗಳ ತೆಗೆದ ಘಟನೆ ನಗರದ ರೇಣುಕಾ ಮಂದಿರದ ಬಳಿ ಇಂದು ನಡೆದಿದೆ.

ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ತಪಾಸಣೆ ನಡೆಸುತ್ತಿದ್ದಾಗ ಬೈಕ್ ಸವಾರನೊಬ್ಬ ಹೆಲ್ಮೆಟ್ ಹಾಕದೇ ಬಂದಿದ್ದು, ಈ ವೇಳೆ ಪೊಲೀಸರು ತಡೆದು 500 ರೂ. ದಂಡ ವಿಧಿಸಿದ್ದಾರೆ. ದಂಡ ಕಟ್ಟಲು ವಿವಿಧ ಕಾರಣಗಳನ್ನು ಹೇಳಿದ್ದ ಬೈಕ್ ಸವಾರ ಬಳಿಕ ದಂಡವನ್ನು ಕಟ್ಟಿದ್ದಾನೆ. ಆದರೆ, ಆತ ಪೊಲೀಸರೊಂದಿಗೆ ತಂಟೆ ತೆಗೆದಿದ್ದು, ಬೇರೆಯವರು ಹೆಲ್ಮೆಟ್ ಹಾಕದೇ ಓಡಾಡುವವರಿಗೆ ಯಾಕೆ ದಂಡು ಹಾಕುತ್ತಿಲ್ಲ. ನನಗೆ ಯಾಕೆ ದಂಡ ಹಾಕಿದ್ದೀರಿ ಎಂದು ವಾದಿಸಿದ್ದಾನೆ. ಇದು ಸರ್ಕಾರಿ ನಿಯಮವಾಗಿದ್ದು, ಯಾರೇ ಸಂಚಾರಿ ನಿಯಮ ಉಲ್ಲಂಘಿಸಿದರೂ ಎಲ್ಲರಿಗೂ ದಂಡ ಹಾಕುತ್ತೇವೆ ಎಂದು ಹೇಳಿದರೂ ಬಿಡದೇ ವಾದಿಸಿದ್ದಾನೆ.

ಪೊಲೀಸರು ನಿಯಮದ ಬಗ್ಗೆ ವಿವರಿಸಿ, ಹೇಳಿದರೂ ಕೇಳದೇ ಬೇರೆಯವರನ್ನು ತೋರಿಸಿ ದಂಡ ಹಾಕುವಂತೆ ಒತ್ತಾಯ ಮಾಡುತ್ತಿದ್ದ. ಬಳಿಕ ಟ್ರಾಫಿಕ್ ಸಿಪಿಐ ತಿಮ್ಮಣ್ಣ ಬಂದು ಬೈಕ್ ಸವಾರನಿಗೆ ತಿಳಿ ಹೇಳಿದ ಬಳಿಕ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಪೊಲೀಸರಿಗೆ ಇಂತ ಪ್ರಕರಣಗಳು ತಲೆನೋವಾಗಿ ಪರಿಣಮಿಸಿವೆ.

## ಉಪಾಧ್ಯಕ್ಷರಾಗಿ ಬಸವರಾಜ್ ಆಯ್ಕೆ



ದಾವಣಗೆರೆ, ಡಿ.19 - ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಉಪಾಧ್ಯಕ್ಷರಾಗಿ ದಾವಣಗೆರೆ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಎನ್. ಬಸವರಾಜ್ ಆಯ್ಕೆಯಾಗಿದ್ದಾರೆ.

## ಕುಣೆಬೆಳಕೆರೆಯಲ್ಲಿ ಇಂದು ಮರುಳಸಿದ್ದೇಶ್ವರ ಸ್ವಾಮಿ ಕಾರ್ತಿಕ

ಹರಿಹರ ತಾಲ್ಲೂಕು ಕುಣೇಬೆಳಕೆರೆಯಲ್ಲಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ಇಂದು ರಾತ್ರಿ 9.30ಕ್ಕೆ ಜರುಗಲಿದೆ ಎಂದು ಗ್ರಾಮದ ಬಾವಿಕಟ್ಟಿ ಹನುಮಂತಪ್ಪ ತಿಳಿಸಿದ್ದಾರೆ.

## ನಗರದ ಈಶ್ವರ - ವಿನಾಯಕ ದೇವಾಲಯದಲ್ಲಿ ಇಂದು ಕಾರ್ತಿಕ

ಶ್ರೀ ಶಿವಕುಮಾರ ಸ್ವಾಮಿ ಬಡಾವಣೆ ಮೊದಲನೇ ಹಂತದಲ್ಲಿರುವ ಶ್ರೀ ಈಶ್ವರ ವಿನಾಯಕ ದೇವಾಲಯದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತೀಕೋತ್ಸವ ನಡೆಯಲಿದೆ.

# ಹೊನ್ನಾಳಿ : ದುಡುಮೆಯಲ್ಲೇ ದತ್ತಾಶ್ರಮ ನಿರ್ಮಾಣದ ಚಿಂತನೆ



### ಬಸವೇಶ್ವರ ದತ್ತಾವಧೂತರು

ಹೊನ್ನಾಳಿ, ಡಿ.19- ನಮ್ಮ ಮಕ್ಕಳಿಗೆ ಧರ್ಮ, ಸಂಸ್ಕೃತಿ ಕುರಿತು ಸಕಾಲದಲ್ಲಿ ಸೂಕ್ತ ತಿಳಿವಳಿಕೆ ನೀಡಬೇಕಾದ ಮಹತ್ತರ ಜವಾಬ್ದಾರಿ ಪೋಷಕರ ಮೇಲಿದೆ ಎಂದು ಇಲ್ಲಿನ ಹೊಸಕೇರಿಯ ಸದ್ಗುರು ದತ್ತಾಶ್ರಮದ ಶ್ರೀ ಶಿವಗುರು ಬಸವೇಶ್ವರ ದತ್ತಾವಧೂತರು ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಎದುರಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ದತ್ತ ಜಯಂತಿಯ ಪ್ರಯುಕ್ತ ಹಮ್ಮಿಕೊಂಡ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಮ್ಮ ಸಂಸ್ಕೃತಿ ಉಳಿಸಿ-ಬೆಳೆಸುವತ್ತ ನಾವೆಲ್ಲರೂ ಚಿಂತಿಸಬೇಕು. ಹಾಗಾಗಿ, ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಗೆ ನಮ್ಮ ಸಂಸ್ಕೃತಿ ಬಗ್ಗೆ ಅಭಿಮಾನ ಮೂಡಿಸಬೇಕು ಎಂದು ತಿಳಿಸಿದರು.

ನಮ್ಮಲ್ಲಿ ಒಳ್ಳೆಯತನ ಇದ್ದರೆ ಬೇರೆಯವರಿಂದಲೂ ಒಳಿತಾಗುತ್ತದೆ. ಗುರು-ಹಿರಿಯರಿಗೆ ಗೌರವ ನೀಡುವ ಭಾವನೆ ಬೆಳೆಸಿಕೊಳ್ಳಬೇಕು. ಜ್ಞಾನಿಗಳಾಗುವ ನಿಟ್ಟಿನಲ್ಲಿ ನಾವು ಚಿಂತನೆ ನಡೆಸಬೇಕು ಎಂದು ಹೇಳಿದರು.

ಹೊನ್ನಾಳಿ ಪಟ್ಟಣದ ಹೊಸಕೇರಿಯ ಸದ್ಗುರು ದತ್ತಾಶ್ರಮಕ್ಕೆ ಸ್ವಂತ ಕಟ್ಟಡವಿಲ್ಲ. ಮುಂದಿನ ದಿನಗಳಲ್ಲಿ ಹೊನ್ನಾಳಿಗೆ ಸಮೀಪದ ಸ್ಥಳದಲ್ಲೇ ಆಶ್ರಮದ ಸ್ವಂತ ಕಟ್ಟಡ ನಿರ್ಮಿಸುವ ಯೋಜನೆ ಇದೆ. ನಾವು ನಮ್ಮ ಶ್ರಮದ ದುಡಿಮೆಯಲ್ಲಿ ನಂಬಿಕೆ ಇಟ್ಟಿದ್ದೇವೆ. ನಮ್ಮ ಆಶ್ರಮದ ಭಕ್ತರೇ ನಮ್ಮ ಆಸ್ತಿ. ಹಾಗಾಗಿ, ಇನ್ನೂ ಹತ್ತು ವರ್ಷಗಳಾದರೂ ಚಿಂತೆಯಿಲ್ಲ. ಶ್ರಮದ ದುಡಿಮೆಯ ಹಣದಲ್ಲೇ ಆಶ್ರಮದ ನೂತನ ಕಟ್ಟಡ ನಿರ್ಮಿಸಲಾಗುವುದು ಎಂದು ತಿಳಿಸಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಹಿರೇಮಠದ ಬಸವರಾಜಪ್ಪ ಮಾತನಾಡಿ, ಹಿರಿಯ ರೈತನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ಹೋರಾಟದಿಂದಾಗಿ ರೈತರಿಗೆ ಸರ್ಕಾರದ ಸವಲತ್ತುಗಳು ನ್ಯಾಯಯುತವಾಗಿ ಲಭಿಸುತ್ತಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳ ಒಡೆದು ಆಳುವ ನೀತಿಯಿಂದಾಗಿ ರೈತ ಕುಲ ಹೀನಸ್ಥಿತಿ ತಲುಪಿದೆ ಎಂದರು.

ಹೊನ್ನಾಳಿಯ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಜ್ಯೋತಿ ಮಾತನಾಡಿ, ಧಾರ್ಮಿಕ ಆಚರಣೆಗಳು ನಮ್ಮ ಇಹ-ಪರದ ಉದ್ಧಾರಕ್ಕಿರುವ ಸುಲಭ ಮಾರ್ಗಗಳು. ಹಾಗಾಗಿ, ಎಲ್ಲರೂ ಧರ್ಮ ಮಾರ್ಗದಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕೆಂದರು.

ಭದ್ರಾವತಿಯ ಅಶ್ವತ್ಥಕಟ್ಟೆ ಧರ್ಮಸ್ಥಳ ಪಾದಯಾತ್ರೆ ಸೇವಾ ಸಮಿತಿಯ ಅಧ್ಯಕ್ಷ ಎಸ್. ಸಂಪತ್‌ಕುಮಾರ್, ರಟ್ಟೇಹಳ್ಳಿ ತಾಲ್ಲೂಕು ಮೇದೂರಿನ ಗುರುಸ್ವಾಮೀಜಿ ಚನ್ನಬಸಪ್ಪರೆಡ್ಡಿ, ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯ ತಾಲ್ಲೂಕು ಅಧ್ಯಕ್ಷ ಬೇಲಿಮಲ್ಲೂರು ಎನ್. ಸಿದ್ದಪ್ಪ, ನಿವೃತ್ತ ಪ್ರಾಂಶುಪಾಲ ಮಂಜಪ್ಪ, ಹೊಳೆಹರಳಹಳ್ಳಿ ಗ್ರಾಮದ ಶ್ರೀ ಸದ್ಗುರು ದತ್ತಾಶ್ರಮದ ಅಧ್ಯಕ್ಷ ಎಚ್.ಎಲ್. ಬಸವರಾಜ್, ಎಚ್.ಎಸ್. ಮಲ್ಲಪ್ಪ, ಕತ್ತಿಗೆ ಮಂಜಪ್ಪ, ಡಿ. ಲೋಕೇಶ್ ಇತರರು ಮಾತನಾಡಿದರು.

ಗಿರೀಶ್, ಹೊಸಕೇರಿ ಯೋಗೀಶ್, ರಘು, ಪೇಟೆ ವಿಜಯಕುಮಾರ್ ಪಾಟೀಲ್ ಇತರರು ಇದ್ದರು. ಜಾನುವಾರು ನಾಟಿ ವೈದ್ಯರಾದ ಕತ್ತಿಗೆ ಪುಟ್ಟಮಲ್ಲಪ್ಪ, ಗೋವಿನಕೋವಿ ಜವಾನ್ ನಿಂಗಪ್ಪ ದಂಪತಿಯನ್ನು ಹಾಗೂ ಕಾರ್ಯಕ್ರಮದ ಸೇವಾರ್ಥಿಗಳನ್ನು ಶ್ರೀ ಶಿವಗುರು ಬಸವೇಶ್ವರ ದತ್ತಾವಧೂತರು ಸನ್ಮಾನಿಸಿದರು.

## ಮಾಗಾನಹಳ್ಳಿ ರಸ್ತೆಯ ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ



ದಾವಣಗೆರೆಯ ಮಾಗಾನಹಳ್ಳಿ ರಸ್ತೆಯ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ 6 ಗಂಟೆಗೆ ಕಡೇ ಕಾರ್ತಿಕೋತ್ಸವ ನಡೆಯಲಿದೆ.

ಬೆಳಿಗ್ಗೆ 6ಕ್ಕೆ ರುದ್ರಾಭಿಷೇಕ, ಮಹಾಪ್ರಸಾದ ಏರ್ಪಡಿಸಲಾಗಿದೆ. ಸಂಜೆ 6 ಕ್ಕೆ ಕಾರ್ತಿಕ ನಡೆಯಲಿದೆ ಎಂದು ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.


ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್, ದಾವಣಗೆರೆ.

ಉಪನ್ಯಾಸಕರು ಬೇಕಾಗಿದ್ದಾರೆ

★ MSc., Microbiology
★ MSc., Pathology ★ MSc., Nursing
Hurry Up admission for 1st Year
Health Inspector Course
70195 86789, 99020 55335

Srishyla Educational Trust®
GM HALAMMA PU COLLEGE
GMIT Campus, P.B. Road, Davanagere. Ph: 9972211111
WANTED IMMEDIATELY
A Renowned PU college in Davanagere is looking to fill the following Positions

| | | |
|---|---|---|
| 01 | Mathematics (Mains Level) | MSc in Mathematics 10-15yrs of Experience |
| 02 | Economics Lecturer | MA, B.Ed with 2-5yrs of Experience |
| 03 | kannada Lecturer | MA, B.Ed with 2-5yrs of Experience |
| 04 | Computer Science Lecturer | MSc / MCA 2-5yrs of Experience |
| 05 | Librarian | B.Lib / M.Lib |
| 06 | Social Science High SCHOOL TEACHER | MSc, B.Ed 2-5yrs of Experience |

Deserving Candidates will be given attractive salary
WALK-IN INTERVIEW WITH YOUR ORIGINALS
on 20th, 21st & 22nd December 2021, Time 9:00 am onwards
Contact: 9972211111, 9141158731, 9141158732
Send your CV to principal@gmhpuc.ac.in Immediately.


ದಾಮ್‌ಕೋಸ್
ದಾವಣಗೆರೆ ಅಡಿಕೆ ಅಭಿವೃದ್ಧಿ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘ ನಿ., ದಾವಣಗೆರೆ.
ಎಂ.ಸಿ. ಗೋದಾಮು ನಂ. 1, (ಎನ್.ಜಿ.ಆರ್.ಜಿ) ಎ.ಪಿ.ಎಂ.ಸಿ. ಮಳಿಗೆ,
ಹಳೇ ಜಿಲ್ಲಾಧಿಕಾರಿಗಳ ಕಛೇರಿ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ. ಫೋನ್ : 250120

22ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮಾನ್ಯ ಸಹಕಾರಿ ಬಂಧುಗಳೇ,
ನಮ್ಮ ಸಂಘದ 2020-2021ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 21-12-2021ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ತರಳಬಾಳು ಸಭಾಭವನ, ಅನುಭವ ಮಂಟಪ, ಆವರಣ, ಹದಡಿ ರಸ್ತೆ, ದಾವಣಗೆರೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ. ಶಿವಕುಮಾರ್ ಇವರ ಘನ ಅಧ್ಯಕ್ಷತೆಯಲ್ಲಿ ನಡೆಯುವಂತೆ ಏರ್ಪಡಿಸಿರುತ್ತದೆ. ಮಾನ್ಯ ಸರ್ವ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.
ಅಧ್ಯಕ್ಷರು/ನಿರ್ದೇಶಕರು, ದಾಮ್‌ಕೋಸ್, ದಾವಣಗೆರೆ.



ಶ್ರೀ ಶಿವಕುಮಾರ್ ಬಿ.ಕೆ. ಹಳೇಬಾತಿ ಅಧ್ಯಕ್ಷರು | ಶ್ರೀಮತಿ ಶಶಿಕಲಮ್ಮ ಬಿ.ಕೆ. ಹೊಸಬೆಳವನೂರು ಉಪಾಧ್ಯಕ್ಷರು | ಶ್ರೀ ರೇವಣಸಿದ್ದಪ್ಪ ಎ.ಜಿ. ಅತ್ತಿಗೆರೆ, ನಿರ್ದೇಶಕರು | ಶ್ರೀ ಮರುಳಸಿದ್ದಪ್ಪ ಹೆಚ್. ಜಿ. ರಾಮಗೊಂಡನಹಳ್ಳಿ ನಿರ್ದೇಶಕರು | ಶ್ರೀ ಮಲ್ಲಿಕಾಜುನ್ ಹೆಚ್.ಜಿ. ಹನುಮನಹಳ್ಳಿ ನಿರ್ದೇಶಕರು



ಶ್ರೀಮತಿ ಮಂಗಳಗೌರಮ್ಮ ಹೆಚ್. ಎಸ್. ನಾಗನೂರು ನಿರ್ದೇಶಕರು | ಶ್ರೀ ಉಮೇಶ್ ಕೆ.ಜಿ. ಕೊಡಗನೂರು ನಿರ್ದೇಶಕರು | ಶ್ರೀ ಮಂಜುನಾಥಯ್ಯ ಎಂ. ಆರ್. ಹಳೇಬಾತಿ, ಗುಡ್ಡದ ಕ್ಯಾಂಪ್, ನಿರ್ದೇಶಕರು | ಶ್ರೀ ಬಸವರಾಜಯ್ಯ ಬಿ. ಎಲೇಬೇತೂರು ನಿರ್ದೇಶಕರು | ಶ್ರೀಮತಿ ಸುಧಾ ಕೆ. ಮಳಲ್ಕೆರೆ ನಿರ್ದೇಶಕರು

ವಿಶೇಷ ಸೂಚನೆ : * ಸಭೆಯ ಆಹ್ವಾನ ಪತ್ರಿಕೆ ತಲುಪದಿದ್ದರೆ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಆಗಮಿಸಬೇಕಾಗಿ ಸದಸ್ಯರಿಗೆ ಕೋರಲಾಗಿದೆ. * ವಾರ್ಷಿಕ ಮಹಾ ಸಭೆ ಪ್ರಯುಕ್ತ ಸಂಘದ ಕಛೇರಿಗೆ ದಿನಾಂಕ : 21-12-2021 ರಂದು ರಜೆ ಇರುತ್ತದೆ.

ವಿಶೇಷ ಸೂಚನೆ :
1. ಸಂಘದಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ಹಸಿ ಅಡಿಕೆ, ಬೇಯಿಸಿ ಒಣಗಿಸಿದ ಅಡಿಕೆ ಮತ್ತು ಚಾಲಿ ಅಡಿಕೆಯ ಮಾರಾಟದ ವ್ಯವಸ್ಥೆ ಇರುತ್ತದೆ.
2. ಸದಸ್ಯರು ವಾರ್ಷಿಕ ಮಹಾಸಭೆಗೆ ಆಗಮಿಸುವಾಗ ಸಂಘದ ವಾರ್ಷಿಕ ವರದಿ ಪತ್ರಿಕೆಯನ್ನು ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.

ತರಳಬಾಳು ಸಭಾಭವನದ ಆವರಣದಲ್ಲಿ ಮಿನಿ ಕೃಷಿ ಯಂತ್ರ ಮೇಳವನ್ನು ಆಯೋಜಿಸಲಾಗಿದೆ. ಅಡಿಕೆ ಬೆಳೆಗಾರರು ಇದರ ಸದುಪಯೋಗ ಪಡೆಯಲು ಕೋರಲಾಗಿದೆ.

ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಕಡ್ಡಾಯ ಮಾಡಲಾಗಿದೆ.

## ಐತಿಹಾಸಿಕ ದೇವರ ತಿಮ್ಮಲಾಪುರದ ಲಕ್ಷ್ಮೀ ವೆಂಕಟೇಶ್ವರನ ಅದ್ದೂರಿ ತೇರು




ಹರಪನಹಳ್ಳಿ, ಡಿ.19- ಪಟ್ಟಣದ ಹೊರವಲಯದಲ್ಲಿರುವ ದೇವರ ತಿಮಲಾಪುರ ಗ್ರಾಮದ ಪ್ರಸಿದ್ಧ ಶ್ರೀ ವೆಂಕಟೇಶ್ವರ ದೇವರ ರಥೋತ್ಸವ ಭಾನುವಾರ ರಾತ್ರಿ ಅಪಾರ ಭಕ್ತರ ನಡುವೆ ಸಡಗರದಿಂದ ಜರುಗಿತು.

ಬೆಳಿಗ್ಗೆ ಪಂಚಾಮೃತ ಅಭಿಷೇಕದೊಂದಿಗೆ ವಿವಿಧ ಪೂಜೆಗಳು ನಡೆದವು. ಮಧ್ಯಾಹ್ನ 12ಕ್ಕೆ ಬ್ರಹ್ಮರಥೋತ್ಸವ, ಸಂಜೆ ದೇವಸ್ಥಾನದಲ್ಲಿ ಶ್ರೀ ವೆಂಕಟೇಶ್ವರ ದೇವರ ಪೂಜೆಯನ್ನು ನೆರವೇರಿಸಿ, ಪಲ್ಲಕಿ ಉತ್ಸವದ ಮೂಲಕ ರಥದ ಬಳಿ ಆಗಮಿಸಿ, ಮೂರು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಹರಾಜು ಹಾಕಲಾಯಿತು. ಸ್ವಾಮಿಯ ಧ್ವಜವನ್ನು ತಿಮ್ಲಾಪುರದ ಗೌಡಪ್ಪರ ಕೆಂಚಪ್ಪ 51 ಸಾವಿರಗಳಿಗೆ ತಮ್ಮದಾಗಿಸಿಕೊಂಡರು, ಹೂವಿನ ಹಾರವನ್ನು ತಳವಾರ ನಾಗರಾಜ್ ವಾಲ್ಮೀಕಿ ನಗರ 38 ಸಾವಿರಕ್ಕೆ ಪಡೆದರು. ನಂತರ ಪೂರ್ವಾಭಿಮುಖವಾಗಿ ರಥ ಸಾಗಿತು.


ಸಿಪಿಐ ಕಮ್ಮಾರ ನಾಗರಾಜ್, ಪಿಎಸ್ಐ ಸಿ.ಪ್ರಕಾಶ್ ಹಾಗೂ ಪೊಲೀಸ್ ಸಿಬ್ಬಂದಿಗಳು ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

ಕೆಪಿಸಿಸಿ ಮಹಿಳಾ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಗೊಂಗಡಿ ನಾಗರಾಜ್, ಗ್ರಾ.ಪಂ ಸದಸ್ಯರಾದ ರಮೇಶ್, ಪೂಜಾರ ಪ್ರಸನ್ನ, ಅನುಷ ನಾಗರಾಜ್, ರೇಣುಕಾ ಮಂಜುನಾಥ್, ಕಟ್ಟಿ ರಂಗನಾಥ್, ಡಾ.ಹರ್ಷ ಕಟ್ಟಿ, ದಂಡಿನ ಹರೀಶ್, ಕಟ್ಟಿ ಆನಂದಪ್ಪ, ದೇವಸ್ಥಾನದ ಗುಮಾಸ್ತ ರಮೇಶ್, ಗ್ರಾಮದ ಮುಖಂಡರಾದ ಸಣ್ಣ ನಿಂಗಪ್ಪ, ಮೂಡ್ಲಪ್ಪ, ಜೆಟ್ಟಪ್ಪರ ಮಂಜುನಾಥ್, ಜಿ.ಈಶ್ವರ, ವಕೀಲ ತಿಪ್ಪೇಶ್, ಅರ್ಚಕರಾದ ಶ್ರೀನಿವಾಸ ಪೂಜಾರ, ವಿಷ್ಣು ಪೂಜಾರ, ಲಕ್ಷ್ಮಿ ಪತಿ, ಆನಂದ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.



## ನಗರದಲ್ಲಿ ಇಂದು ಶ್ರೀ ಬಕ್ಕೇಶ್ವರ ಕಾರ್ತಿಕೋತ್ಸವ

ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ ಕಾರ್ತಿಕೋತ್ಸವ ನಡೆಯಲಿದೆ. ಇದೇ ಸಂದರ್ಭದಲ್ಲಿ ಸಿಡಿಮದ್ದಿನ ಕಾರ್ಯಕ್ರಮ ಏರ್ಪಡಿಸಲಾಗಿದೆ.



## ನಗರದಲ್ಲಿ ಇಂದು ಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕ

ಗೀತಾಂಜಲಿ ಚಿತ್ರಮಂದಿರ ಪಕ್ಕದಲ್ಲಿರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ರಾತ್ರಿ 7.30 ಕ್ಕೆ ಕಡೇ ಕಾರ್ತಿಕೋತ್ಸವ ಏರ್ಪಡಿಸಲಾಗಿದೆ ಎಂದು ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘ ತಿಳಿಸಿದೆ.

## ನಗರದ ಸಮೀರ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಡಿ.19- ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಮತ್ತು ಅಲ್ಟ್ರಾಟೆಕ್ ಸಹಯೋಗದೊಂದಿಗೆ ನೀಡಲಾಗುವ 2021 ನೇ ಸಾಲಿನ ಅತ್ಯುತ್ತಮ ಗೃಹ ನಿರ್ಮಾಣ ಪ್ರಶಸ್ತಿಗೆ ನಗರದ ಕ್ಲಾಸಿಕ್ ಅಸೋಸಿಯೇಟ್ಸ್‌ನ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ ಕೆ.ಎಂ. ಸಮೀರ್ ಖಾನ್ ಹಾಗೂ ತ್ರಿಷಿಕ್ ಸ್ಟ್ರಕ್ಚರಲ್ ಕನ್‌ಸಲ್ಟೆಂಟ್‌ನ ಸ್ಟ್ರಕ್ಚರಲ್ ಇಂಜಿನಿಯರ್ ಕೆ.ಎಂ. ಜಗದೀಶ್ ಭಾಜನರಾಗಿದ್ದಾರೆ.

ಹುಬ್ಬಳ್ಳಿಯಲ್ಲಿ ನಿನ್ನೆ ಜರುಗಿದ ಸಮಾರಂಭದಲ್ಲಿ ಸಮೀರ್ ಖಾನ್ ಮತ್ತು ಜಗದೀಶ್ ಅವರುಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮೌನೇಶ್ವರ ಫೀಡರ್ ವ್ಯಾಪ್ತಿಯ ಹೆಚ್.ಕೆ.ಆರ್. ವೃತ್ತ, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಇ.ಎಸ್.ಐ .ಆಸ್ಪತ್ರೆ ಕೆ.ಟಿ.ಜೆ ನಗರ ಪೊಲೀಸ್ ಠಾಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಕಿತ್ತೂರಿನಲ್ಲಿ ಇಂದು ಬಸವೇಶ್ವರ ಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ ತಾಲ್ಲೂಕಿನ ಕಿತ್ತೂರು ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ಕಡೆ ಕಾರ್ತಿಕೋತ್ಸವ ಇಂದು ಸಂಜೆ 7 ಗಂಟೆಗೆ ನಡೆಯುವುದು. ಈ ವರ್ಷ ವಿಶೇಷವಾಗಿ 3,101 ದೀಪಗಳನ್ನು ಬೆಳಗಿಸಲಾಗುವುದು. ಮಹಾಮಂಗಳಾರತಿ, ನಂತರ ಪ್ರಸಾದ ವಿರುತ್ತದೆ.

## ಇಂದು ದೊಡ್ಡಪೇಟೆ ಬಸವೇಶ್ವರ, ಶ್ರೀ ದಾನಮ್ಮ ದೇವಿ ಕಡೇ ಕಾರ್ತಿಕ





ದಾವಣಗೆರೆ ದೊಡ್ಡಪೇಟೆಯ ಶ್ರೀ ಬಸವೇಶ್ವರ, ಶ್ರೀ ದಾನಮ್ಮ ದೇವಿಯ ಕಡೇ ಕಾರ್ತಿಕ ಇಂದು ಸಂಜೆ 7.30 ಕ್ಕೆ ನಡೆಯುವುದು. ಭಕ್ತಾದಿಗಳು ಕಾರ್ತಿಕೋತ್ಸವದಲ್ಲಿ ಭಾಗವಹಿಸುವಂತೆ ದೇವಸ್ಥಾನ ಸಮಿತಿ ಕೋರಿದೆ.


## ಸವಿನೆನಪು



ನಮ್ಮ ಆತ್ಮೀಯರೂ, 33 ವರ್ಷಗಳ ನಿಕಟ ಒಡನಾಡಿಗಳೂ ಆಗಿದ್ದ

**'ಕೀರ್ತಿಶೇಷ ಶ್ರೀ ಮೋತಿ ಪಿ. ರಾಮರಾಯರು'**

ಗಣ್ಯ ಉದ್ಯಮಿಗಳು, ಖ್ಯಾತ ವರ್ತಕರು, ಪ್ರಸಿದ್ಧ ಕೈಗಾರಿಕೋದ್ಯಮಿಗಳು, ಉದಾರ ದಾನಿಗಳು, ಸಹೃದಯಿ ಸಮಾಜ ಸೇವಕರು

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿರುವ...

**ಟಿ. ಶಂಕರಪ್ಪ**

ಮಾಜಿ ಸದಸ್ಯರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ಜೆಡಿಎಸ್ ಕಾರ್ಯಕರ್ತರು, ಮಾಲೀಕರು, ಮೋತಿ ಸೈಕಲ್ ಮಾರ್ಟ್, ಮಹಿಳಾ ಸಮಾಜ ಕಾಂಪ್ಲೆಕ್ಸ್, ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

**ಹೆಚ್.ಕೆ. ಪಟ್ಟಾಭಿರಾಮನ್**




ಜಮೀನ್ದಾರರು, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

**ಹೆಚ್.ಕೆ. ಶಂಕರನ್**

ಜಮೀನ್ದಾರರು, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.



## ಸವಿನೆನಪು



ಗಣ್ಯ ಉದ್ಯಮಿಗಳೂ, ಖ್ಯಾತ ವರ್ತಕರೂ, ಪ್ರಸಿದ್ಧ ಕೈಗಾರಿಕೋದ್ಯಮಿಗಳೂ
ಪ್ರತಿಫಲಾಪೇಕ್ಷೆ ಇಲ್ಲದ ಉದಾರ ದಾನಿಗಳೂ, ಸಹೃದಯಿ ಸಮಾಜ ಸೇವಕರೂ ಆಗಿದ್ದ

**'ಕೀರ್ತಿಶೇಷ ಶ್ರೀ ಮೋತಿ ಪಿ. ರಾಮರಾಯರು'**

ಅಮರರಾಗಿ ಇಂದು ಅವರ

**ಒಂಭತ್ತನೇ ವರ್ಷದ ಪುಣ್ಯಸ್ಮರಣೆ**

ನಿಮ್ಮ ಆದರ್ಶಗಳೇ ನಮಗೆ ದಾರಿದೀವಿಗೆ, ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತ್ನಿ : ಶ್ರೀಮತಿ ಗೌರಮ್ಮ ರಾಮರಾವ್

ಪುತ್ರರು, ಸೊಸೆಯಂದಿರು, ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ವರ್ಗ

✦ ಮೋತಿ ಸ್ವೀಟ್ಸ್ ✦ ಮೋತಿ ಐಸ್‌ಕ್ರೀಮ್ ✦ ಮೋತಿ ಬೇಕರೀಸ್ ✦ ಮೋತಿ ಎಂಟರ್ ಪ್ರೈಸಸ್
✦ ಮೋತಿ ಫುಡ್ ಪ್ಯಾರಾಡೈಸ್ ✦ ಕಾವೇರಿ ಎಂಟರ್‌ಪ್ರೈಸಸ್ ✦ ಕಾವೇರಿ ಬಿಲ್ಡರ್ಸ್
ಎನ್. ಪ್ರಕಾಶ್, ಎನ್. ರಾಘವೇಂದ್ರ, ಪಿ. ಎನ್. ರವಿಚಂದ್ರ, ಎನ್. ಬಾಲಕೃಷ್ಣ
✦ ಕಾವೇರಿ ಬೇಕರೀಸ್ ✦ ಕಾವೇರೀಸ್ ಬೇಕರ್ಸ್ ಬಾಸ್ಕೆಟ್
✦ ಕಾವೇರಿ ಬೇಕರೀಸ್ & ಫುಡ್ಸ್ ✦ ಕಾವೇರಿ ಬೇಕರೀಸ್, ರಾಂ & ಕೋ. ಸರ್ಕಲ್
✦ ಕಾವೇರಿ ಬೇಕರ್ಸ್ ಬೌಲ್, ಡೆಂಟಲ್ ಕಾಲೇಜು ಎದುರು ಹಾಗೂ ಮೋತಿ ಸಮೂಹ ಸಂಸ್ಥೆಗಳು, ದಾವಣಗೆರೆ.









## ಸ್ಥಳ ಬದಲಾವಣೆ

**ಸೌಂಡ್ ಹೆಲ್ತ್**

ಡಯಗ್ನೋಸ್ಟಿಕ್ ಅಲ್ಟ್ರಾಸೌಂಡ್ ಸೆಂಟರ್




ದಿನಾಂಕ : 20.12.2021 ರಂದು ಸೋಮವಾರದಿಂದ ನಮ್ಮ ಅಲ್ಟ್ರಾ ಸೌಂಡ್ ಹೆಲ್ತ್ ಸೆಂಟರ್‌ನ ಸೇವೆಗಳನ್ನು ಈ ಕೆಳಕಂಡ ಬದಲಾದ ವಿಳಾಸದಲ್ಲಿ ಪಡೆಯಬಹುದು.

ಡಾ|| ಜಿ.ಎಂ. ರಾಜಶೇಖರ ಡಾ|| ಲಕ್ಷ್ಮೀ ರಾಜಶೇಖರ

# 3366/1-A, ಶಾಮನೂರು ರಸ್ತೆ
ಅಪೋಲೋ ಫಾರ್ಮಸಿ ಹತ್ತಿರ, ದಾವಣಗೆರೆ.
ಫೋನ್ : 63629 28128


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte